ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೮ ಆಗಸ್ಟ್ -೨೦೧೭ ಸಂಚಿಕೆ - ೧

ಜಿ.ಎಸ್.ಟಿ ಮತ್ತು ಕುಮಾರಪ್ಪ ಅರ್ಥಶಾಸ್ತ್ರ

*

ಅರಣ್ಯನಾಶ ಮತ್ತು ಜನ ವಿರೋಧ

*

ಇಫ್ತಾರ್ ಕೂಟ ಒಂದು ವಿಮರ್ಶೆ

ಜನಪದ ವಿಚಾರದಲ್ಲಿ

ಆಗಸ್ಟ್ - ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಆಗಸ್ಟ್- ೨೦೧೭
ಸಂಪುಟ - ೧೮
ಸಂಚಿಕೆ - ೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಹೆಣ್ಣುಗಳು ನಾವು ಹೆಣ್ಣುಗಳು

ಹೆಣ್ಣುಗಳು ನಾವು ಹೆಣ್ಣುಗಳು
ಕಷ್ಟ ಪಡಲೆಂದೇ ಇಳೆಗೆ ಬಂದವರು
ಜೀತಕ್ಕೆ ಬಿದ್ದವರಂತೆ ದುಡಿಯುತ್ತಿರುವವರು
ನಮ್ಮ ಅಸ್ತಿತ್ವಕ್ಕಾಗಿ ಹೆಣಗುತ್ತಿರುವವರು॥

ಪರರ ಸುಖಕ್ಕೆ ಬಾಳುತ್ತಾ ಜೀವ ಸವೆಸುತ್ತಿರುವವರು
ಪತಿಯ ಅನವರತ ಕಾಮಕ್ಕೆ
ಬಲಿಯಾಗುತ್ತಿರುವವರು
ಕಾಮಪಾಪಿಪಾಸುಗಳ ದಾಹಕ್ಕೆ,
ಧನದಾಹಿಗಳ ಲೋಭಕ್ಕೆ
ನಮ್ಮನ್ನು ನಾವೇ ದಹಿಸಿಕೊಳ್ಳುತ್ತಿರುವವರು॥

ಸ್ವಂತಿಕೆಗಾಗಿ ಹೋರಾಡುತ್ತಾ
ಪ್ರೀತಿಗಾಗಿ ಹಾತೊರೆಯುತ್ತಾ
ಕ್ಷಮಾಯಾಧರಿತ್ರಿಯಾಗಿ ಬಾಳುತ್ತಾ
ಎಲ್ಲ ನೋವುಗಳ ನುಂಗಿ ಬಾಳುತ್ತಿರುವವರು॥

ಮಕ್ಕಳಿಗೆ ಜನ್ಮನೀಡುತ್ತಾ ತಾಯಂದಿರಾಗಿ
ಸಾರ್ಥಕಬಾಳ ಸವೆಸುತ್ತಿರುವವರು
ಸೋದರಿಯಾಗಿ, ತಾಯಾಗಿ, ಅಜ್ಜಿಯಾಗಿ
ಪ್ರೇಮಸುಧೆ ಹಂಚುತ್ತಿರುವವರು॥

ನಮಗೂ ಒಂದು ಮನವಿದೆ,
ಬಾಳಿದೆ ಬಯಕೆಯಿದೆ
ದೇವತೆಗಳೆಂದು ಪೂಜಿಸದಿರಿ
ಮಾನವರಂತೆ ಬಾಳಲು ಬಿಡಿರಿ॥

ಗಂಡು ಹೆಣ್ಣು ಪ್ರಕೃತಿಯಲಿ
ಒಂದು ನಾಣ್ಯದ ಎರಡು ಮುಖಗಳು
ಕೂಡಿಬಾಳಿದರೆ ಸ್ವರ್ಗಸುಖ ಇಲ್ಲದಿರೆ
ನಿಮಗೆ ಸುಖ, ನಮಗೆ ಬರೀ ದುಃಖ

- ಸುಮತಿ ಕೆ.ಎಸ್

ಚಿಂತನೆಗೊಂದು ಸಂಗತಿ

ಭಾಗ್ಯ - ದೌರ್ಭಾಗ್ಯವಾದಾಗ

ಅನೇಕ ಬಗೆಯ ಭಾಗ್ಯಗಳ ಸುರಿಮಳೆಯಾಗುತ್ತಿದೆ. ಅನ್ನಭಾಗ್ಯ ಬಿಸಿಊಟ ಭಾಗ್ಯ ತಾಳಿಭಾಗ್ಯ, ಲ್ಯಾಪ್‌ಟಾಪ್ ಭಾಗ್ಯ, ಸೈಕಲ್ ಭಾಗ್ಯ, ದಂತಭಾಗ್ಯ, ಇತ್ಯಾದಿ, ಇತ್ಯಾದಿ. ಅತಿವೃಷ್ಟಿಯಿಂದ ಹಾನಿಯಾಗುವಂತೆ ಭಾಗ್ಯಗಳ ಮಳೆಯಿಂದಲೂ ಸಮಾಜಕ್ಕೆ ಹಾನಿಯಾಗುತ್ತದೆಂದು ಅನಿಸುತ್ತದೆ. ಹಾನಿಯು ಕಣ್ಣಿಗೆ ಕಾಣುವಂಥದಲ್ಲ. ಸ್ಥಾಪಿತವಾಗಿರುವ ಆರೋಗ್ಯಕರ ಸಾಮಾಜಿಕ ಮೌಲ್ಯಗಳ ಕುಸಿಯುವಿಕೆಯೇ ಆಹಾನಿ. ಉದಾಹರಣೆಗೆ ತಾಯಿ-ಮಕ್ಕಳ ಸಂಬಂಧ, ಬಿಸಿಯೂಟದ ಯೋಜನೆ ಪ್ರಾರಂಭವಾಗುವ ಮೊದಲು ಮಕ್ಕಳು ಶಾಲೆಗೆ ಹೋಗುವ ಮುನ್ನ ಅಥವಾ ಮಧ್ಯಾಹ್ನ ಮನೆಗೆ ಬಂದು ತಾಯಿ ಕೈಯಿಂದ ಬಡಿಸಿದ ಅಡುಗೆಯನ್ನು ಊಟ ಮಾಡುತ್ತಿದ್ದರು. ಶಾಲೆಯಲ್ಲಿ ಬಿಸಿಯೂಟ ಜಾರಿಗೆ ಬಂದಮೇಲೆ ಮಕ್ಕಳ ಮತ್ತು ತಾಯಿಯ ಕರುಳ ಸಂಬಂಧದ ಅಭಿವ್ಯಕ್ತಿಗೆ ಕಡಿಮೆ ಅವಕಾಶ ದೊರೆಯುತ್ತಿದೆ. ಮಕ್ಕಳಲ್ಲಿ ಸಹಜವಾಗಿ ಇರಬೇಕಿದ್ದ ತಾಯಿಸ್ಮರಣೆ ಕಡಿಮೆಯಾಗುತ್ತಾ ಹೋಗುತ್ತಿದೆ. ಅಂತಯೇ ಉಪಕಾರದ ಸ್ಮರಣೆಯು ಕೂಡ. ಇನ್ನೊಂದು ಉದಾಹರಣೆ ವಸತಿ ನಿಲಯಗಳ ಭಾಗ್ಯ ಅನೇಕ ಕಾರಣಗಳಿಂದಾಗಿ ವಸತಿನಿಲಯಗಳಿಗೆ ಮಕ್ಕಳನ್ನು ಸೇರಿಸುವ ಪ್ರವೃತ್ತಿ ತಂದೆ-ತಾಯಿಗಳಲ್ಲಿ ಬೆಳೆಯುತ್ತಿದೆ. ಪೋಷಕರ ಜೊತೆ ಇದ್ದು ಬೆಳೆಯಬೇಕಾದ ವಯಸ್ಸಿನ ಮಕ್ಕಳು ಮನೆಯಿಂದ ಭಿನ್ನವಾದ ವಾತಾವರಣದಲ್ಲಿ ಬೆಳೆಯುವುದರಿಂದ ಮಕ್ಕಳ ವ್ಯಕ್ತಿತ್ವ ಪರಿಪೂರ್ಣವಾಗಿ ವಿಕಸಿಸುವುದಿಲ್ಲ. ಮೂರನೇಯ ಉದಾಹರಣೆ: ದೇಶದ ಎಲ್ಲ ಜಿಲ್ಲೆಗಳಲ್ಲಿರುವ ಮಕ್ಕಳ ದತ್ತುಕೇಂದ್ರಗಳು, ದತ್ತುಕೇಂದ್ರಗಳ ಮೂಲಕ ಅನಾಥ ಮಗುವಿಗೆ ಹೇಗೊ ಆಶ್ರಯ ದೊರೆಯುತ್ತದೆ ಎಂಬ ಕಾರಣದಿಂದಲೋ ಏನೋ, ಅನೈತಿಕ ಮಕ್ಕಳ ಜನನದ ಸಂಖ್ಯೆ ಹೆಚ್ಚಾಗುತ್ತಿದೆ. ಪರೋಕ್ಷವಾಗಿ ಅನೈತಿಕತೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತಿದೆ. ನಾಲ್ಕನೇಯ ಉದಾಹರಣೆ ಅಕ್ರಮ ವ್ಯವಹಾರಗಳನ್ನು ಸಂಕ್ರಮಗೊಳಿಸುವ ನೀತಿ. ಇದರಿಂದಾಗಿ ಸಮಾಜದಲ್ಲಿ ಅನೇಕ ಬಗೆಯ ಅಕ್ರಮ ವ್ಯವಹಾರಗಳಿಗೆ ಸಿಂಧುತ್ವದ ಪೋಷಾಕನ್ನು ಧರಿಸಿ ಸಮಾಜವನ್ನು ಮರೆಸಲಾಗುತ್ತದೆ. ಇಂಥ ಎಲ್ಲ ಭಾಗ್ಯಗಳು ಸಮಾಜಕ್ಕೆ ದೌರ್ಭಾಗ್ಯವಾಗಿ ಪರಿಣಮಿಸಬಹುದೆಂಬ ಭೀತಿ ಸಕಾರಾತ್ಮಕ ಚಿಂತನೆಯ ಪ್ರತಿವ್ಯಕ್ತಿಗೆ ಕಾಡುವುದು.

ಇಂಥ ಭಾಗ್ಯಗಳು ಸಮಾಜಕ್ಕೆ ದೌರ್ಭಾಗ್ಯವಾಗಿ ಪರಿಣಮಿಸಬಹುದೆಂಬ ಭೀತಿ ಸಕಾರಾತ್ಮಕ ಚಿಂತನೆಯ ಪ್ರತಿವ್ಯಕ್ತಿಗೆ ಕಾಡುವುದು. ಇಂಥ ಅನೇಕ ಉದಾಹರಣೆಗಳು ಎಲ್ಲರ ಗಮನಕ್ಕೆ ಬಂದಿರಬಹುದು. ಆದ್ದರಿಂದ ಸರ್ಕಾರ ದಯಪಾಲಿಸುವ ಭಾಗ್ಯಗಳು ದೌರ್ಭಾಗ್ಯವಾದಾಗ ಅದಕ್ಕೇನು ಪರಿಹಾರ ಉಂಟೆಂಬುದನ್ನು ಸಮಾಜದ ಹಿತಚಿಂತಕರೆಲ್ಲರೂ ಗಂಭೀರ ಚಿಂತನೆ ಮಾಡಬೇಕಿದೆ. ಸರ್ಕಾರ 'ಭಾಗ್ಯ'ದ ಹೆಸರಿನಲ್ಲಿ ದೂರದೃಷ್ಟಿಯಿರದ ಅನೇಕ ಯೋಜನೆಗಳನ್ನು ಜಾರಿಗೆ ತಂದು ಬಡ ಜನರಿಗೆ ತಾತ್ಕಾಲಿಕ ಸಮಾಧಾನ ನೀಡುತ್ತಿದೆ. ಇಂಥ 'ಭಾಗ್ಯ'ಗಳ ಗುಣಮಟ್ಟ ದಿನೇ ದಿನೇ ಕುಸಿಯುತ್ತಿದೆ. ಅನ್ನಭಾಗ್ಯ ಯೋಜನೆಯಡಿ ಕಾಳು, ಎಣ್ಣೆ, ಉಪ್ಪು; ವಿದ್ಯಾರ್ಥಿಗಳಿಗೆ ವಿತರಿಸಿದ ಶೂ, ಮೊಟ್ಟೆ, ಸೈಕಲ್; ಆಸ್ಪತ್ರೆಗಳಲ್ಲಿ ವಿತರಿಸುವ ಔಷಧಿ, ಆಹಾರ ಸಾಮಗ್ರಿ.. ಹೀಗೆ ಎಲ್ಲದರಲ್ಲೂ ಗುಣಮಟ್ಟ ಕುಸಿತ ಆಗುತ್ತಿರುವುದು ಸರಿಯಲ್ಲ. ಜನಪರ ಯೋಜನೆಗಳನ್ನು ಜಾರಿಗೆ ತರುವುದು ಒಳ್ಳೆಯದಾದರೂ ಅವುಗಳ ಅನುಷ್ಠಾನ ಹಳ್ಳಹಿಡಿಯುತ್ತಿರುವುದು ದುರಂತವಲ್ಲವೇ?

ಕೆಲವು 'ಭಾಗ್ಯಗಳನ್ನು ಹಣ ದೋಚುವ ಸಲುವಾಗಿಯೇ ರೂಪಿಸಲಾಗಿದೆಯೇ ಎಂಬ ಸಂಶಯ ಮೂಡುತ್ತದೆ. ಸರ್ಕಾರ ಎಚ್ಚೆತ್ತುಕೊಂಡು ಗುಣಮಟ್ಟಕ್ಕೆ ಒತ್ತುಕೊಟ್ಟು ಜನರ ಮೆಚ್ಚುಗೆಗೆ ಪಾತ್ರವಾಗುವುದು ಯಾವಾಗ?

●

ಜಿ.ಎಸ್.ಟಿ ಮತ್ತು ಕುಮಾರಪ್ಪ ಅರ್ಥಶಾಸ್ತ್ರ

– ಸುರೇಂದ್ರ ಕೌಲಗಿ

(ಮಾನವನ ವ್ಯಕ್ತಿತ್ವದ ಗುಣಮಟ್ಟವನ್ನು ಉನ್ನತಿಸಬೇಕಿದೆ ಮತ್ತು ಅಭಿವೃದ್ಧಿಪಡಿಸಬೇಕಿದೆ- ಜೆ.ಸಿ. ಕುಮಾರಪ್ಪ)

ಜುಲೈ ಒಂದರಿಂದ ದೇಶದಾದ್ಯಂತ ಸರಕು ಮತ್ತು ಸೇವಾ ತೆರಿಗೆ ಹೆಸರಿನಲ್ಲಿ ಹೊಸ ತೆರಿಗೆ ಪದ್ಧತಿ ಜಿ.ಎಸ್.ಟಿ ಜಾರಿಗೆ ಬಂದಿದೆ. ಸಧ್ಯದ ಆಡಳಿತಾರೂಢ ಪಕ್ಷದ ಸರ್ಕಾರ ಏಕರೂಪ ತೆರಿಗೆ ಪದ್ಧತಿಯ ಅನುಷ್ಠಾನವನ್ನು ಐತಿಹಾಸಿಕ ಘಟನೆ ಎಂದು ಬಣ್ಣಿಸಿದೆ. ಆ ತೆರಿಗೆಗೆ ಸಂಬಂಧಿಸಿದ ಶಾಸನವನ್ನು ಜೂನ್ ಮೂವತ್ತರ ಮಧ್ಯರಾತ್ರಿಯಿಂದ ಜಾರಿಗೆ ಕೊಟ್ಟಿದೆ. ಯಾವ ರೀತಿ ದೇಶಕ್ಕೆ ಸ್ವಾತಂತ್ರ್ಯ ೧೯೪೭ ಆಗಸ್ಟ್ ಹದಿನಾಲ್ಕರ ಮಧ್ಯರಾತ್ರಿ ದೊರೆಯಿತೊ ಅದೇ ರೀತಿಯ ಐತಿಹಾಸಿಕ ಕ್ಷಣವನ್ನು ಏಕರೂಪ ತೆರಿಗೆಯ ಜಾರಿಯನ್ನು ಘೋಷಿಸಲು ಪುನರ್‌ವರ್ತಿಸಲಾಯಿತು. ಆದರೆ ದೇಶದ ಮುಖ್ಯ ವಿರೋಧ ಪಕ್ಷಗಳು ಐತಿಹಾಸಿಕವೆಂದು ಕರೆಯಲ್ಪಡುವ ಲೋಕಸಭೆಯ ವಿಶೇಷ ಅಧಿವೇಶನವನ್ನು ಬಹಿಷ್ಕರಿಸಿದವು. ಏಕರೂಪ ತೆರಿಗೆಯ ಪದ್ಧತಿಯ ಬಗ್ಗೆ ಅವುಗಳಿಗೆ ತಮ್ಮದೇ ಆದ ಕೆಲವು ಆಕ್ಷೇಪಣೆಗಳಿವೆ. ಆ ಆಕ್ಷೇಪಣೆಗಳಿಗೆ ಸಮಧಾನವನ್ನೀಯುವ ಪ್ರಯತ್ನವನ್ನು ಸರ್ಕಾರ ಮಾಡಲಿಲ್ಲ. ಆದ್ದರಿಂದ ವಿರೋಧ ಪಕ್ಷಗಳ ನೈತಿಕ ಬೆಂಬಲವಿಲ್ಲದೆ ಜಾರಿಗೆ ಬಂದಿರುವ ಹೊಸ ಏಕರೂಪ ತೆರಿಗೆ ಪದ್ಧತಿಗೆ ಇದು ಒಂದು ಕಪ್ಪು ಚುಕ್ಕೆ ಎಂದು ಹೇಳಬಹುದು. ದೇಶದಲ್ಲಿ ಇದುವರೆಗೆ ಜಾರಿಯಲ್ಲಿದ್ದ ವಿವಿಧ ಪ್ರಕಾರದ ಮತ್ತು ವಿವಿಧ ಹಂತಗಳಲ್ಲಿಯ ಸರಕು ಮತ್ತು ಸೇವಾ ಮೇಲಿನ ತೆರಿಗೆಗಳನ್ನು ಕ್ರೂಢಿಕರಿಸಿ ಏಕರೂಪದ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗಿದೆ.

ರಾಜಕೀಯವಾಗಿ ಮತ್ತು ಭಾವಾನಾತ್ಮಕವಾಗಿ ಒಂದು ದೇಶವಾಗಿರುವ ಭಾರತ ಈಗ ಜಿ.ಎಸ್.ಟಿ ಏಕರೂಪ ತೆರಿಗೆ ಅನುಷ್ಠಾನದಿಂದಾಗಿ ಆರ್ಥಿಕ ವಾಗಿಯೂ ಒಂದೇ ದೇಶ ಆದಂತಾಗಿದೆ.

ದೇಶದ ಎಲ್ಲ ರಾಜ್ಯಗಳು ಹೊಸ ತೆರಿಗೆ ವ್ಯವಸ್ಥೆಯಲ್ಲಿ ಸಮಭಾಗಿಗಳಾಗಿವೆ. ಕ್ರೂಢೀಕೃತವಾಗುವ ಆದಾಯದಲ್ಲಿ ಕೂಡ ಪಾಲುದಾರರಾಗಿವೆ. ಗಣರಾಜ್ಯ ವ್ಯವಸ್ಥೆಗೆ ನಿಜ ಅರ್ಥ ಬಂದಂತಾಗಿದೆ. ಆದರೆ ದೇಶದ ಎಲ್ಲ ಅಭಿವೃದ್ಧಿ,

ಆರ್ಥಿಕ, ಶೈಕ್ಷಣಿಕ, ವ್ಯವಸಾಯ ಮುಂತಾದ ಎಲ್ಲ ನೀತಿಗಳು ಪಾಶ್ಚಿಮಾತ್ಯ ದೇಶಗಳ ಅನುಕರಣೆಯಾಗಿರುವಂತೆಯೇ ಈ ಏಕರೂಪ ತೆರಿಗೆ ಪದ್ಧತಿಯೂ ವಿದೇಶಗಳಲ್ಲಿಯ ತೆರಿಗೆ ಪದ್ಧತಿಯ ಅನುಕರಣೆಯೇ ಆಗಿದೆ.

ರಾಜ್ಯಗಳ ಸಹಕಾರ ಮತ್ತು ಸಹಾಯದೊಂದಿಗೆ ಜಿ.ಎಸ್.ಟಿ ಜಾರಿಗೆ ಬಂದಿದೆಯಾದರೂ ಗಣರಾಜ್ಯದ ವಿಕೇಂದ್ರಿಕರಣದ ಆಶಯಕ್ಕೆ ವ್ಯತಿರಿಕ್ತವಾಗಿ ಇದೊಂದು ಕೇಂದ್ರೀಕೃತ ಅರ್ಥವ್ಯವಸ್ಥೆ ಆಗಿದೆ. ದೇಶಕ್ಕೆಲ್ಲಾ ಏಕರೂಪ ತೆರಿಗೆ ಪದ್ಧತಿ ಜಾರಿಗೆ ಬಂದಿರುವುದರಿಂದ ದೇಶವೆಲ್ಲ ಒಂದು ಮಾರುಕಟ್ಟೆಯಾಗಿರುವುದರಿಂದ ಜೀವನಾವಶ್ಯಕವಾದ ಎಲ್ಲ ವಸ್ತುಗಳು ತೆರಿಗೆಯ ಜಾಲಕ್ಕೆ ಬಂದಿವೆ. ವಸ್ತುಗಳನ್ನು ಉಪಯೋಗಿಸುವವರು, ಉತ್ಪಾದಿಸುವವರು ಮತ್ತು ಸೇವಾ ಕ್ಷೇತ್ರದಲ್ಲಿ ದುಡಿಯುತ್ತಿರುವವರು ಹೊಸ ತೆರಿಗೆ ಕಕ್ಷೆಯೊಳಗೆ ಬರುತ್ತಾರೆ. ಅಂದರೆ ದೇಶದ ಪ್ರತಿಯೋರ್ವ ಪ್ರಜೆಯೂ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ತೆರಿಗೆ ಕೊಡುವ ವ್ಯಕ್ತಿಯಾಗಿರುವುದರಿಂದ ಪ್ರತಿಯೊಬ್ಬ ಪ್ರಜೆ ಕೇವಲ ಸಹಜ ನಾಗರೀಕನಾಗಿ ಉಳಿದಿಲ್ಲ. ಈಗ ಅವನು ಆರ್ಥಿಕ ಘಟಕ ಕೂಡ (ಜಛಿಂಟಿಚಿಟುಛಿ ಟಚಿಟಿ) ಆಗಿದ್ದಾನೆ. ಇಲ್ಲಿ ಸಮಾಧಾನಕರ ವಿಷಯವೇನೆಂದರೆ ಗಾಂಧೀಜಿಯವರು ೧೯೩೦ ರಲ್ಲಿ ನಡೆಸಿದ್ದ ಹೋರಾಟದ ಕಾರಣದಿಂದಾಗಿ ಸರ್ಕಾರಕ್ಕೆ ಉಪ್ಪಿನ ಮೇಲೆ ತೆರಿಗೆಯನ್ನು ಹಾಕುವುದು ಬಹುಶಃ ಸರಿಯಲ್ಲವೆಂದನಿಸಿ ಸರ್ಕಾರ ಅದನ್ನು ಜಿ.ಎಸ್.ಟಿ ಯ ಹೊರಗಿಟ್ಟಿರಬಹುದು.

ಕೇಂದ್ರೀಕೃತಗೊಳ್ಳುತ್ತಿರುವ ಅರ್ಥವ್ಯವಸ್ಥೆಯಿಂದಾಗಿ ಜೀವನದ ಎಲ್ಲ ಚಟುವಟಿಕೆಗಳು –. ಅವು ಸಾಂಸ್ಕೃತಿಕವಾಗಿರಲಿ, ಸಾಹಿತ್ಯಿಕವಾಗಿರಲಿ ಅಥವಾ ಕ್ರೀಡೆಗಳೇ ಆಗಿರಲಿ ಅವು ಕೇಂದ್ರಿಕೃತವೇ ಆಗುವವು. ಕೇಂದ್ರಿಕರಣದಿಂದ ರಾಜಕೀಯ ಕ್ಷೇತ್ರವೂ ಹೊರ್ತಾಗಿ ಉಳಿಯಲು ಸಾಧ್ಯವಾಗುವುದಿಲ್ಲ. ಕೇಂದ್ರ ಸರ್ಕಾರದ ಅಧಿಕಾರವು ಕೂಡ ಕಾಲಕಳೆದಂತೆ ಇನ್ನಷ್ಟು ಕೇಂದ್ರಿಕೃತವಾಗುತ್ತಾ ಹೋಗುವುದು. ವಿವಿಧ ಪ್ರದೇಶದಲ್ಲಿಯ ರಾಷ್ಟ್ರಿಕೃತ ಬ್ಯಾಂಕುಗಳನ್ನು ಒಗ್ಗೂಡಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂಬ ಹೆಸರಿನಲ್ಲಿ ಆರ್ಥಿಕ ವ್ಯವಹಾರಗಳನ್ನು ಕೇಂದ್ರೀಕರಣ ಮಾಡಲಾಗಿದೆ.

ಶಿಕ್ಷಣ, ವ್ಯವಸಾಯ, ಅರಣ್ಯ ಮುಂತಾದ ವಿಷಯಗಳು ಸಂವಿಧಾನದ ಪ್ರಕಾರ ರಾಜ್ಯ ಸರ್ಕಾರದ ಕ್ಷೇತ್ರಗಳಾಗಿದ್ದರೂ ಅಲ್ಲಿ ಕೇಂದ್ರ ಸರ್ಕಾರದ ನೀತಿ–ನಿರ್ಧಾರಗಳೇ ಪ್ರಮುಖವಾಗುತ್ತವೆ. ಕೇಂದ್ರಸರ್ಕಾರದ ಅನುದಾನವನ್ನೇ ರಾಜ್ಯಸರ್ಕಾರಗಳು ಹೆಚ್ಚಾಗಿ ಅವಲಂಬಿಸಿರುವುದರಿಂದ ರಾಜ್ಯಸರ್ಕಾರಗಳ

ಪ್ರಭುತ್ವದ ಮೊನಚು ಕಡಿಮೆಯಾಗಿ ಕೇಂದ್ರಸರ್ಕಾರದ್ದೇ ತೀಕ್ಷ್ಣವಾಗುತ್ತದೆ. ವಿಕೇಂದ್ರಿಕೃತ ಆಡಳಿತ ಪದ್ಧತಿ ಎಂದು ಭಾವಿಸಲ್ಪಟ್ಟಿರುವ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿಯೂ ಕೇಂದ್ರ ಸರ್ಕಾರದ ನೀತಿ-ನಿರ್ಧಾರಗಳ ಪ್ರಭಾವವನ್ನು ಕಾಣುತ್ತೇವೆ. ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇರುವ ಕೇಂದ್ರ ಸರ್ಕಾರದ ವ್ಯವಸ್ಥೆಯಡಿಯಲ್ಲಿ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳು ಒಳಪಟ್ಟಿರುವುದರಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿಯೂ ಕೇಂದ್ರೀಕರಣ ಸರ್ವಸಾಮಾನ್ಯವಾಗಿದೆ. ಅಲ್ಲದೆ ದೇಶಕ್ಕೊಂದೇ ಭಾಷೆ ಇರಬೇಕೆಂಬ ಉದ್ದೇಶದಿಂದ ಹಿಂದಿಯನ್ನು ಹಿಂದಿಯೇತರ ಪ್ರಜೆಗಳ ಮೇಲೆ ಹೇರಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮತ್ತು ಪಂಚವಾರ್ಷಿಕ ಯೋಜನೆಗಳ ಹೆಸರಿನಲ್ಲಿ ದೇಶದ ಆಡಳಿತ ಕೇಂದ್ರಿಕರಣದತ್ತ ದಾಪುಗಾಲು ಹಾಕುತ್ತಿದೆ. ಪ್ರಜೆಗಳಿಗಾಗಿ ಸರ್ಕಾರವೇ ಅಥವಾ ಸರ್ಕಾರಕ್ಕಾಗಿ ಪ್ರಜೆಗಳೇ ಎಂದು ಪ್ರಶ್ನೆ ಕೇಳುವ ಕಾಲ ಬಂದಿದೆ.

ವಿಕೇಂದ್ರಿಕರಣದ ಪ್ರಬಲ ಪ್ರತಿಪಾದಕ, ಶಾಶ್ವತ ಅರ್ಥಶಾಸ್ತ್ರದಂಥ ವಿಚಾರದ ಪ್ರವರ್ತಕ ಜೆ.ಸಿ. ಕುಮಾರಪ್ಪನವರ ಜನ್ಮದ ೧೨೫ ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಜಿ.ಎಸ್.ಟಿ ವ್ಯವಸ್ಥೆಯ ಸಾಧಕ-ಬಾಧಕಗಳನ್ನು ಕುರಿತು ಗಂಭೀರ ಚರ್ಚೆ ನಡೆಯಬೇಕಿದೆ. ಜಿ.ಎಸ್.ಟಿ ಯ ಅನುಷ್ಠಾನ ಸರಾಗವಾಗಿ ಆಗಬೇಕಾದರೆ ಇನ್ನು ಮೂರು ವರ್ಷಗಳಾದರೂ ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಈ ಮಧ್ಯೆ ಯಾವುದಾದರೂ ಸಮಸ್ಯೆಗಳು ಉಂಟಾದರೆ ಜಿ.ಎಸ್.ಟಿ ತನ್ನ ಸ್ವರೂಪವನ್ನೇ ಬದಲಾಯಿಸಿಕೊಳ್ಳಬಹುದು. ಉದಾಹರಣೆಗೆ:- ಭಾರತ-ಪಾಕ್ ಯುದ್ಧ ನಡೆದಲ್ಲಿ, ಅಮೇರಿಕಾ-ಉತ್ತರಕೋರಿಯಾ ಮಧ್ಯೆ ಘರ್ಷಣೆ ನಡೆದಲ್ಲಿ ಭಾರತ-ಚೀನಾ ಸಂಘರ್ಷ ನಡೆದಲ್ಲಿ, ಜಿ.ಎಸ್.ಟಿ ಇಂದಿನ ತನ್ನ ಮೂಲ ಸ್ವರೂಪವನ್ನು ಬದಲಾಯಿಸಿಕೊಳ್ಳಬಹುದು. ಜಾರಿಗೆ ಬಂದಿರುವ ಜಿ.ಎಸ್.ಟಿಯಲ್ಲಿ ಗ್ರಾಮೋದ್ಯೋಗಗಳ ಮತ್ತು ಸುಸ್ಥಿರ ಜೀವನದ ಬಗ್ಗೆ ಯಾವ ರೀತಿ ಉತ್ತೇಜಕಾರಕ ಸಂಗತಿಗಳಿವೆ ಎಂಬುದು ಗೊತ್ತಾಗುತ್ತಿಲ್ಲ. ಆರ್ಥಿಕವಾಗಿ ಮುಂದಿರುವವರ ಮತ್ತು ಕೈಗಾರಿಕೋದ್ಯಮಿಗಳಿಗೆ ಸಂಬಂಧಿಸಿದ ವಿವರಣೆಗಳೇ ಹೆಚ್ಚಾಗಿ ಕೇಳಿ ಬರುತ್ತಿವೆ. ಜಿ.ಎಸ್.ಟಿಯ ಮೂಲ ಉದ್ದೇಶ ಆರ್ಥಿಕ ಸಂಪನ್ಮೂಲವನ್ನು ಕ್ರೂಢೀಕರಿಸಿಕೊಳ್ಳುವುದೇ ಆಗಿದೆ. ಸಂಪನ್ಮೂಲ ಅಗತ್ಯವಾಗಿರುವುದು ದೇಶದ ಅಭಿವೃದ್ಧಿಗಾಗಿ ಎಂದು ಹೇಳಲಾಗುತ್ತದೆ. ದೇಶದ ಅಭಿವೃದ್ಧಿಯ ಚಿಂತನೆಯಲ್ಲಿ ದೇಶದ ರಕ್ಷಣಾ ವ್ಯವಸ್ಥೆಯೂ ಸೇರಿಕೊಳ್ಳುತ್ತದೆ. ರಕ್ಷಣಾ ವ್ಯವಸ್ಥೆಗೆ ಕ್ರೂಢೀಕರಣಗೊಂಡ ಸಂಪನ್ಮೂಲದಲ್ಲಿ ಶೇಕಡ ೮೦ ರಷ್ಟು ಹಣ ರಕ್ಷಣಾ

ವಲಯಕ್ಕೆ ಖರ್ಚಾಗುತ್ತದೆ. ಆದ್ದರಿಂದ ಜಿ.ಎಸ್.ಟಿ ಮೂಲಕ ಸಂಗ್ರಹವಾಗುವ ತೆರಿಗೆ ಪರೋಕ್ಷವಾಗಿ ಹಿಂಸಾಚಾರಕ್ಕೆ ಪ್ರೋತ್ಸಾಹ ಕೊಡುತ್ತದೆ. ನಮ್ಮ ಈಗಿನ ಕೇಂದ್ರ ಸರ್ಕಾರ ಜಗತ್ತಿನ ಎಲ್ಲ ದೇಶಗಳಿಂದ ಅಭಿವೃದ್ಧಿಗಾಗಿ ಅನೇಕ ಪ್ರಕಾರದ ಷರತ್ತುಗಳೊಂದಿಗೆ ಧನ ಸಹಾಯ ಪಡೆಯುತ್ತಿದೆ. ಈ ರೀತಿ ಪಡೆದ ವಿದೇಶಿ ಸಾಲದ ಮೊತ್ತ ಎಷ್ಟೊಂದು ಇದೆ ಎಂಬುದು ದೇಶಕ್ಕೆ ಗೊತ್ತಿಲ್ಲ. ಆದರೆ ಒಂದು ಮಾತು ಮಾತ್ರ ಸತ್ಯ: ಸಾಲಕೊಟ್ಟ ಅಥವಾ ಧನ ಸಹಾಯ ಮಾಡಿದ ದೇಶಗಳು ನಮ್ಮ ದೇಶದ ಹಣಕಾಸು, ಹಣದ ಚಲಾವಣೆ, ವಿನಿಮಯನೀತಿ ಇತ್ಯಾದಿಗಳನ್ನು ನಿರ್ಧರಿಸುವಲ್ಲಿ ಪ್ರಭಾವ ಬೀರುತ್ತವೆ. ಅಂದರೆ ಅಷ್ಟರ ಮಟ್ಟಿಗೆ ದೇಶ ತನ್ನ ಆರ್ಥಿಕ ಸ್ವಾತಂತ್ರ್ಯ ಕಳೆದುಕೊಂಡಂತ್ತಾಗುತ್ತದೆ.

ದೇಶದ ಆರ್ಥಿಕ ಬದಲಾವಣೆಯ ಈ ಸಂಕ್ರಾಂತಿ ಕಾಲದಲ್ಲಿ ಜೆ.ಸಿ. ಕುಮಾರಪ್ಪನವರು ಪ್ರತಿಪಾದಿಸಿದ್ದ ವಿಕೇಂದ್ರಿಕೃತ ಅಹಿಂಸಕ ರಾಜಕೀಯ ಆರ್ಥಿಕ ಚಿಂತನೆಯನ್ನು ಜ್ಞಾಪಿಸಿಕೊಳ್ಳುವುದು ಅಗತ್ಯವಾಗಿದೆ. ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಕುಮಾರಪ್ಪನವರ ಆರ್ಥಿಕ ವಿಚಾರಗಳ ಬಗ್ಗೆ ಅಧ್ಯಯನ ಮತ್ತು ವಿಚಾರ ಸಂಕಿರಣ ತುರ್ತಾಗಿ ನಡೆಯಬೇಕಿದೆ. ಸ್ವತಂತ್ರ ಭಾರತದ ಅತ್ಯಂತ ಗಣ್ಯ ಮತ್ತು ಆದ್ಯ ಚಿಂತಕರಲ್ಲಿ ಮತ್ತು ಮಹಾತ್ಮ ಗಾಂಧೀಜಿಯವರ ಸ್ವರಾಜ್ಯದ ವಿಚಾರಗಳಿಗೆ ಅರ್ಥಶಾಸ್ತ್ರದ ಸ್ವರೂಪಕೊಟ್ಟ ಕುಮಾರಪ್ಪನವರನ್ನು ಮರೆತು ದೊಡ್ಡ ತಪ್ಪು ಮಾಡಿದ್ದೇವೆ. ಅವರ ೧೨೫ ನೇ ವರ್ಷದ ಆಚರಣೆಯ ನಿಮಿತ್ತದಲ್ಲಾದರೂ ಎಲ್ಲ ಕಡೆಗೆ ಅವರ ಆರ್ಥಿಕ ಸಿದ್ಧಾಂತಗಳ ಬಗ್ಗೆ ವಿಚಾರಮಂಥನ ನಡೆಯುವಂತಾಗಲಿ ಮತ್ತು ದೇಶಕ್ಕೆ ಹೊಸ ಬೆಳಕು ಮತ್ತು ಪರ್ಯಾಯ ಆರ್ಥಿಕ ವ್ಯವಸ್ಥೆ ಸಿಗುವಂತಾಗಲಿ ಎಂದು ಹಾರೈಸಬೇಕಿದೆ.

●

ಅರಣ್ಯನಾಶ ಮತ್ತು ಜನ ವಿರೋಧ

(ಕಳೆದ ಸಂಚಿಕೆಯಿಂದ ಮುಂದುವರೆದುದು)

ಮೂಲ -ಜಾರ್ಜ್ ಆಲ್ಫ್ರೆಡ್ ಜೇಮ್ಸ್

ವಸಾಹತುಶಾಹಿ ಕಾಲದಲ್ಲಿ ಬ್ರಿಟೀಷರು ಭಾರತದ ಅರಣ್ಯ ಸಂಪನ್ಮೂಲಗಳ ಬಗ್ಗೆ ವಿಶೇಷ ಆಸಕ್ತಿಯನ್ನು ಹೊಂದಿದ್ದರು. ೧೯ನೇ ಶತಮಾನದ ಪ್ರಾರಂಭದಲ್ಲಿ ಮಲಬಾರ್ ಪ್ರದೇಶದಲ್ಲಿಯ ಟೀಕ್ ಅರಣ್ಯಗಳು ಬ್ರೀಟೀಷ್ ದ್ವೀಪದಲ್ಲಿದ್ದ ಹಡಗು ನಿರ್ಮಾಣದ ಕೈಗಾರಿಕೆಗೆ ಒಂದು ಮಹತ್ವದ ಸಂಪನ್ಮೂಲವಾಗಿದ್ದವು. ಮುಂದೆ ೧೯ನೇ ಶತಮಾನದ ಮಧ್ಯಕಾಲದಲ್ಲಿ ಹಿಮಾಲಯದಲ್ಲಿದ್ದ ಗಟ್ಟಿ ಗುಣದ ಮರಗಳಿಗೆ ಬೇಡಿಕೆ ಹೆಚ್ಚಾಯಿತು. ಏಕೆಂದರೆ ಆ ವೇಳೆಯಲ್ಲಿ ಬ್ರಿಟೀಷ್ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಭಾರತದಲ್ಲಿ ವ್ಯಾಪಕವಾಗಿ ರೈಲು ಸಂಪರ್ಕದ ಜಾಲವನ್ನು ಅಭಿವೃದ್ಧಿ ಪಡಿಸಲು ಆರಂಭಿಸಿತ್ತು. ಆದ್ದರಿಂದ ರೈಲ್ವೆಇಲಾಖೆಗೆ ಬಹುದೊಡ್ಡ ಪ್ರಮಾಣದಲ್ಲಿ ರೈಲು ಕಂಬಿಗಳಿಗಾಗಿ ಮರದ ಹಾಸುಗಳು (ಸ್ಲೀಪರ್ಸ್) ಅಗತ್ಯವಾದವು. ಇದಕ್ಕಾಗಿ ದೇಶದ ವಿವಿಧ ಅರಣ್ಯ ಪ್ರದೇಶಗಳು ಬಲಿಯಾದವು. ತೆಹರಿ ಗಡ್ವಾಲ್ ಪ್ರದೇಶವು ಸಮೃದ್ಧವಾಗಿ ಅತ್ಯಂತ ಸೂಕ್ತ ದೇವದರ್ ಮರಗಳಿಂದ ಸಮೃದ್ಧವಾಗಿ ಕೂಡಿತ್ತಾದ್ದುರಿಂದ ಆ ಪ್ರದೇಶ ಅನುಕೂಲಕರವಾಗಿ ಒದಗಿ ಬಂತು. ಬ್ರಿಟೀಷ್ ಸೈನಿಕನಾಗಿದ್ದು ಸೈನ್ಯವನ್ನು ತ್ಯಜಿಸಿ ಬಂದಿದ್ದ ಫ್ರೇಡರಿಕ್ ವಿಲ್ಸನ್ ಎಂಬುವವನು ತನ್ನ ಬದುಕನ್ನು ಕಟ್ಟಿಕೊಳ್ಳಲು. ಅವನು ಭಾಗೀರಥಿ ಕಣಿವೆಗೆ ಪಯಣ ಬೆಳೆಸಿದ. ತನ್ನ ಬಂದೂಕಿನಿಂದ ಬೇಟೆಯಾಡಲು ಪ್ರಾರಂಭಿಸಿದ ಮತ್ತು ಸ್ಥಳೀಯ ನಿವಾಸಿಗಳೊಂದಿಗೆ ಮಾಂಸವನ್ನು ಹಂಚಿಕೊಳ್ಳಲು ಪ್ರಾರಂಭಿಸಿದ. ಸುಂದರವಾದ ಹಕ್ಕಿಗಳಿಗೂ ಕೂಡ ಗುಂಡಿಕ್ಕಿದ. ಅವುಗಳನ್ನು ಮಸೂರಿಯಲ್ಲಿದ್ದ ವ್ಯಾಪಾರಿಗಳಿಗೆ ಮಾರಲು ಸಮರ್ಥನಾದ. ಹಕ್ಕಿಗಳ ಈ ಮಾಂಸ ಬ್ರಿಟನ್ನಿನ ಪೇಟೆಗೆ ಹೋಗುತ್ತಿತ್ತು. ಈ ಮನಮೋಹಕವಾದ ಹಕ್ಕಿಗಳ ಚರ್ಮಕ್ಕೂ ಮತ್ತು ರೆಕ್ಕೆಗಳಿಗೂ ಅಂತರ್‌ರಾಷ್ಟ್ರೀಯ ಪೇಟೆಯಲ್ಲಿ ಒಳ್ಳೆಯ ಬೆಲೆಯಿತ್ತು. ಅದೇ ರೀತಿ ಕಸ್ತೂರಿ ಮೃಗದ ಕಸ್ತೂರಿಗೆ ಬೆಲೆಯಿತ್ತು. ಜನರಿಗೆ ಅವನು ಕೊಡುತ್ತಿದ್ದ ಮಾಂಸದ ಕಾಣಿಕೆಯಿಂದಾಗಿ ಅಲ್ಲಿಯ ಜನಸಮುದಾಯದಲ್ಲಿ ಫ್ರೆಡರಿಕ್ ವಿಲ್ಸನ್ ಜನಪ್ರಿಯನಾದ. ಆ ಪ್ರದೇಶದ ಬ್ರಾಹಣರೂ ಮಾಂಸಹಾರಿಗಳಾಗಿದ್ದರು. ಅದರಲ್ಲಿಯೂ ಮುಖ್ಯವಾಗಿ ಅವನು ಗುಂಡಿಟ್ಟು ಸಾಯಿಸಿದ ಹಕ್ಕಿಗಳ ಮಾಂಸದ ರುಚಿಗೆ ಮೋಹಗೊಂಡಿದ್ದರು. ಆ ಪ್ರದೇಶದಲ್ಲಿಯ ಅನೇಕ ಬಗೆಯ

ಗ್ರಾಮೋತ್ಸವಗಳ ಸಮಯದಲ್ಲಿ ತಮಟೆ ಬಾರಿಸುತ್ತಿದ್ದವರಿಗೆ ಬ್ರಾಹ್ಮಣರು ಬೆಂಬಲಿಸುತ್ತಿದ್ದರು. ವಿಲ್ಸನ್ ಫ್ರೆಡರಿಕ್‌ನನ್ನು ತಮಟೆ ಬಾರಿಸುವ ಜನಾಂಗದ ಮಧ್ಯೆ ನೆಲೆ ನಿಲ್ಲಿಸಿದರು. ಕೊನೆಯಲ್ಲಿ ಅವನು ಅದೇ ಪ್ರದೇಶದ ಸ್ಥಾನೀಯ ತಮಟೆ ಬಾರಿಸುವವನ ಮಗಳನ್ನು ಮದುವೆಯಾದ ಮತ್ತು ಸಮೀಪದ ಧಾರ್ಮಿಕ ಕ್ಷೇತ್ರವಾದ ಗಂಗೋತ್ರಿ ಬಳಿ ವಾಸ ಮಾಡಲು ಪ್ರಾರಂಭಿಸಿದ. ಗಂಗೋತ್ರಿಯು ಭಾಗೀರಥಿ ನದಿಯ ಉಗಮಸ್ಥಾನ. ಆತನು ಸ್ಥಳೀಯ ಜನರಿಗೆ ಪ್ರಿಯನಾದುದರಿಂದ ಅಲ್ಲಿಯ ದೇಶಿ ಸಂಸ್ಥಾನದ ರಾಜನನ್ನು ಭೇಟಿ ಮಾಡಬೇಕೆಂದು ಜನರು ಅವನಿಗೆ ಸಲಹೆ ಕೊಟ್ಟರು. ಅದರಂತೆ ಅವನು ತೆಹರಿಗೆ ರಾಜನನ್ನು ಭೇಟಿ ಮಾಡಲು ಹೊರಟನು. ಎತ್ತರದ ಈ ಇಂಗ್ಲೀಷ್ ಮನುಷ್ಯ ಪರ್ವತ ಪ್ರದೇಶದ ಸ್ಥಾನೀಯ ವೇಶಭೂಷಣವನ್ನು ಹಾಕಿಕೊಂಡು ಹೋಗಿ ತೆಹರಿ ರಾಜನನ್ನು ಭೇಟಿ ಮಾಡಿದ; ರಾಜನಿಗೆ ಸೂಕ್ತ ರೀತಿಯಲ್ಲಿ ನಮಸ್ಕರಿಸಿದ ಮತ್ತು ರಾಜನಿಗೆ ಮಾಂಸದ ಮಾರಾಟದಿಂದ ತಾನು ಸಂಪಾದಿಸಿದ ಅನೇಕ ಚಿನ್ನದ ನಾಣ್ಯಗಳನ್ನು ಸಮರ್ಪಿಸಿದ. ಚಿನ್ನದ ನಾಣ್ಯಗಳನ್ನು ಹೊಂದಿರುವ ಮನುಷ್ಯನನ್ನು ನೋಡಿ ರಾಜನಿಗೆ ಆಶ್ಚರ್ಯವಾಯಿತು. ಏಕೆಂದರೆ ಅಂಥ ನಾಣ್ಯಗಳು ಅಲ್ಲಿ ಚಲಾವಣೆಯಲ್ಲಿರಲಿಲ್ಲ ಮತ್ತು ಬಹು ಅಪರೂಪದ್ದಾಗಿದ್ದವು. ರಾಜನು ಚಿನ್ನದ ನಾಣ್ಯಗಳನ್ನು ಸಂಪಾದಿಸುವ ಬಗೆ ಹೇಗೆ ಎಂದು ವಿಲ್ಸನ್‌ನನ್ನು ವಿಚಾರಿಸಿದ. ಆಗ ಆತನು ಸ್ಥಳೀಯ ಹಕ್ಕಿಗಳನ್ನು ಗುಂಡಿಟ್ಟು ಸಾಯಿಸಿ ಅವುಗಳ ಚರ್ಮ ಮತ್ತು ರೆಕ್ಕೆಗಳನ್ನು ಮಾರಿ ತನ್ನ ಜೀವನವನ್ನು ನಡೆಸುತ್ತಿರುವುದಾಗಿ ಹೇಳಿದ. ಮಸ್ಸೂರಿಯಲ್ಲಿರುವ ವ್ಯಾಪಾರಸ್ಥರಿಗೆ ಸ್ಥಳೀಯ ಜಿಂಕೆಗಳ ಕಸ್ತೂರಿಯನ್ನು ಒಳ್ಳೆಯ ಬೆಲೆಗೆ ಮಾರುತ್ತಿರುವುದಾಗಿಯೂ ಹೇಳಿದ. ರಾಜನು ವಿಲ್ಸನ್‌ನ ಮಹತ್ವಾಕಾಂಕ್ಷೆ ಮತ್ತು ಅವನ ಸಾಹಸಿ ಕೆಲಸದಿಂದ ಪ್ರಭಾವಿತನಾದ. ಬಹುಗುಣರವರ ಪ್ರಕಾರ ರಾಜ ತನ್ನ ಕೈಯನ್ನು ವಿಲ್ಸನ್‌ನ ತಲೆಯ ಮೇಲೆ ಇಟ್ಟು "ನೀನು ಚಿನ್ನದ ಮೊಟ್ಟೆ ಇಡುವ ನನ್ನ ಹಕ್ಕಿ" ಎಂದು ಉದ್ಗರಿಸಿದ. ವಿಲ್ಸನ್ ಓರ್ವ ಸರಳ ಮತ್ತು ವ್ಯವಹಾರಕುಶಲ ಯುವಕನಾಗಿದ್ದ. ಆಗ ವಿಲ್ಸನ್ ರಾಜನಿಗೆ ಭಾಗೀರಥಿ ಕಣಿವೆಯಲ್ಲಿ ಇನ್ನೂ ಎಷ್ಟು ಚಿನ್ನವಿದೆ ಎಂಬುದನ್ನೂ ಮತ್ತು ಅದನ್ನು ಸಂಪಾದಿಸುವ ಬಗೆ ಹೇಗೆ ಎಂಬುದನ್ನು ರಾಜನಿಗೆ ವಿವರಿಸಿದ. "ಕಣಿವೆಯಲ್ಲಿ ಮರಗಳನ್ನು ಕಡಿಯಲು ಮತ್ತು ಹರಿದ್ವಾರಕ್ಕೆ ನದಿಯ ಪ್ರವಾಹದಲ್ಲಿ ದಿಮ್ಮಿಗಳನ್ನು ತೇಲಿ ಬಿಡಲು ಅನುಮತಿ ಕೊಡಿ" ಎಂದು ವಿಲ್ಸನ್ ರಾಜನನ್ನು ಕೋರಿದ ಹರಿದ್ವಾರದಲ್ಲಿ ರೈಲ್ವೆಗಾಗಿ ಒಳ್ಳೆಯ ಬೆಲೆಯಲ್ಲಿ ದಿಮ್ಮಿಗಳನ್ನು ಮಾರಬಹುದೆಂದು ಹೇಳಿದ. ೧೮೫೦ ರಲ್ಲಿ ಬಹಳ

ಸಾಧಾರಣ ಶುಲ್ಕದ ಬದಲಿಗೆ ವಿಲ್ಸನ್ ತೆಹರಿ ರಾಜ್ಯದ ಕಾಡನ್ನು ಮತ್ತು ಯುಮುನಾ ಭಾಗೀರಥಿ ಕಣಿವೆ ಸೇರಿದಂತೆ ಲೀಜ್‌ಗೆ ಪಡೆದ. ಅದರಿಂದಾಗಿ ಅವನಿಗೆ ಬೇಟೆಯಾಡಲು ಮತ್ತು ಅವುಗಳ ಉತ್ಪನ್ನ ಮಾರಲು ಅವನಿಗೆ ಅನುಕೂಲವಾಯಿತು. ಮುಂದೆ ೧೮೫೦ ರಿಂದ ೧೮೬೪ರವರೆಗಿನ ಅವಧಿಗೆ ಅವನ ಲೀಜ್‌ನ್ನು ವಿಸ್ತರಿಸಿ ಇನ್ನು ಇತರ ಮುಖ್ಯ ಅರಣ್ಯಉತ್ಪನ್ನಗಳನ್ನು ಪಡೆಯಲು ಅವನಿಗೆ ಅನುಮತಿ ಕೊಡಲಾಯಿತು. ಇದಕ್ಕೆ ಬದಲಾಗಿ ಒಂದು ವರ್ಷಕ್ಕೆ ಕೇವಲ ೪೦೦ ರೂಪಾಯಿಗಳ ಶುಲ್ಕವನ್ನು ಪಡೆಯಲಾಯಿತು. ರಾಮಚಂದ್ರ ಗುಹಾರವರ ಪ್ರಕಾರ ವಿಲ್ಸನ್ ನೀರಿನ ಪ್ರವಾಹದೊಂದಿಗೆ ಮರವನ್ನು ಸಾಗಿಸುವ ವಿಧಾನದಕಾರಣಪರುರುಷ. ಸಾಗಾಣಿಕೆಯ ಈ ಮಾಧ್ಯಮವು ಅರಣ್ಯಾಧಾರಿತ ಕೈಗಾರಿಕೆಯ ಅಭಿವೃದ್ಧಿಗೆ ಮಹತ್ತರವಾದ ಶೋಧನೆ ಆಯಿತು. ೧೮೫೫ ರಲ್ಲಿ ವಿಲ್ಸನ್‌ನ ಲೀಜ್ ಅವಧಿ ಮುಗಿದ ನಂತರ ಈಶಾನ್ಯ ದಿಕ್ಕಿನ ರಾಜ್ಯ ಸರ್ಕಾರಗಳು ಬ್ರಿಟೀಷರೊಂದಿಗೆ ಒಪ್ಪಂದ ಮಾಡಿಕೊಂಡು ಅಲ್ಲಿಯ ಎಲ್ಲ ಅರಣ್ಯಗಳನ್ನು ವಾರ್ಷಿಕ ೧೦,೦೦೦ ರೂಪಾಯಿಗಳಿಗೆ ಲೀಜ್‌ಗೆ ಬರೆದು ಕೊಟ್ಟಿತು. ಮುಂದೆ ಈ ಒಪ್ಪಂದದ ಪುನರ್‌ಪರಿಶೀಲನೆ ನಡೆದು ೧೮೮೫ ಮತ್ತು ಪುನಃ ೧೯೦೫ ರಲ್ಲಿ ೨೦ ವರ್ಷಗಳ ಲೀಜ್ ಅವಧಿಗೆ ವಿಸ್ತರಿಸಲಾಯಿತು. ಈ ಪುನರ್‌ಪರಿಶೀಲನೆಗೆ ಕಾರಣವೆನೆಂದರೇ ಸ್ಥಳೀಯ ಜನರಿಗೂ ಅವರ ಅಗತ್ಯಗಳಾದ ಆಹಾರ, ಮೇವು, ಉರುವಲು, ಗೊಬ್ಬರ ಮತ್ತು ಮರಮುಗ್ಗಟ್ಟು ದೊರೆಯುವಂತಾಗಲೆಂಬುದೇ ಆಗಿತ್ತು.

ವಾರ್ಷಿಕ ಬಾಡಿಗೆ ಹಣದ ಬದಲಾಗಿ ೧೯೦೨ ರಿಂದ ರಾಜನು ಅರಣ್ಯ ಆದಾಯದ ಲಾಭದಲ್ಲಿ ಶೇ ೮೦ ರಷ್ಟು ಲಾಭವನ್ನು ಪಡೆದನು. ೧೮೬೯ ಮತ್ತು ೧೮೮೫ ರ ಮಧ್ಯೆ ಹುಟ್ಟಿಕೊಂಡ ಹೊಸ ಕೈಗಾರಿಕೆ ತೆಹರಿ ಗಡ್ವಾಲ್ ಕಾಡುಗಳಿಂದ ದೇವ್‌ಧರ್ ಮರಗಳನ್ನು ಕಡಿಯಲು ಪ್ರಾರಂಭಿಸಿತು. ಇದರ ಪ್ರಮಾಣ ಎಷ್ಟಿತ್ತೆಂದರೆ ೬ ಕೋಟಿ ೫೦೦ ಸಾವಿರ ರೈಲ್ವೆ ಸ್ಲೀಪರ್ಸ ತಯಾರಿಸುವಷ್ಟು ಇತ್ತು. ಅರಣ್ಯ ನಾಶ ಭವಿಷ್ಯದ ರೈಲ್ವೆ ಜಾಲದ ವಿಸ್ತಾರಕ್ಕೆ ಅಡ್ಡಿಯಾದಾಗ ತೆಹರಿ ಗಡ್ವಾಲ್ ಪ್ರದೇಶದ ಕಾಡು ಬ್ರಿಟೀಷ್ ವಸಾಹತುಶಾಹಿಗೆ ಆಯಾಕಟ್ಟಿನ ಅಮೂಲ್ಯ ಮೂಲವೆಂದು ಸಿದ್ಧವಾಯಿತು. ಕಾಲ ಕಳೆದಂತೆ ಮರಗಳ ಸಾಗಾಣಿಕೆ ದೇಶಿಸಂಸ್ಥಾನದ ರಾಜನಿಗೆ ದೊಡ್ಡ ಆದಾಯದ ಏಕೈಕ ಮೂಲವಾಯಿತು. ಮೊದಲನೇಯ ಮತ್ತು ಎರಡನೇಯ ಜಾಗತಿಕ ಯುದ್ಧದ ಸಮಯದಲ್ಲಿ ಈ ಪರ್ವತ ಪ್ರದೇಶದಲ್ಲಿಯ ಮರದ ಸಾಗಣೆ ಬಹು ಹೆಚ್ಚಾಗಿಯೇ ನಡೆಯಿತು. ಮರ ಕಡಿಯುವಿಕೆ ಮತ್ತು ಪ್ರವಾಹದ ಮೂಲಕ ಮರಸಾಗಣೆ ವ್ಯವಸ್ಥೆ

ಉರ್ಜಿತಗೊಂಡ ನಂತರವೆ ಸರ್ಕಾರದಿಂದ ಈ ಸಂಪನ್ಮೂಲಗಳ ಅಭಿವೃದ್ಧಿ ಆಗಲಾರಂಭಿಸಿತು. ಸರ್ಕಾರದಿಂದ ಅರಣ್ಯದ ನಿರ್ವಹಣೆಯ ವ್ಯವಸ್ಥೆ ಜಾರಿಗೆ ಬಂದದ್ದು ಮರಮುಟ್ಟು ಮತ್ತು ನಾಟಾ ಸಂಗ್ರಹಿಸುವುದಕ್ಕಾಗಿ ಹಾಗೂ ಆದಾಯ ತಂದುಕೊಡುವಂಥ ಮರಗಳ ಸಸಿಗಳನ್ನು ಉತ್ಪಾದಿಸುವುದು ಆಗಿತ್ತು. ಹೀಗೆ ವಾಣಿಜ್ಯ ದೃಷ್ಟಿಯ ಅರಣ್ಯ ವ್ಯವಸ್ಥೆಯಿಂದಾಗಿ ಗ್ರಾಮಾಂತರ ಪ್ರದೇಶದ ಜನರು ಹೊಂದಿದ್ದ ಪಾರಂಪರಿಕ ಅರಣ್ಯ ವ್ಯವಸ್ಥೆ ಹೆಚ್ಚಾಗಿ ಆದಾಯ ತರುವ ಮರಗಳ ಉತ್ಪಾದನೆಯ ಕಡೆಗೆ ಜನರ ಗಮನವಿದ್ದುದರಿಂದ ಕಾಡಿನ ವೈವಿಧ್ಯತೆಗೆ ಆಪತ್ತು ಉಂಟಾಯಿತು. ಇಂಥ ವಿಧಾನಗಳಿಂದಾಗಿ ನೂತನವಾಗಿ ರಚನೆಯಾದ ಅರಣ್ಯ ಇಲಾಖೆ ಮತ್ತು ಗ್ರಾಮೀಣ ಜನರ ಮಧ್ಯೆ ತಿಕ್ಕಾಟಕ್ಕೆ ಕಾರಣವಾಗಲು ಪ್ರಾರಂಭಿಸಿತು. ಏಕೆಂದರೆ ಅರಣ್ಯ ಇಲಾಖೆ ಅರಣ್ಯ ಉತ್ಪನ್ನಗಳನ್ನು ಕೇವಲ ವಾಣಿಜ್ಯ ಉದ್ದೇಶವನ್ನೇ ಗಮನದಲ್ಲಿರಿಸಿಕೊಂಡು ಉಪಯೋಗಿಸುತ್ತಿತ್ತು. ಸ್ಥಳೀಯ ಜನರ ಅಗತ್ಯಗಳನ್ನು ಗಮನಿಸುತ್ತಿರಲಿಲ್ಲ. ಜನರ ಅಗತ್ಯತೆ ಮತ್ತು ಅರಣ್ಯಕ್ಕೆ ಒದಗಿದ ಹೀನ ಸ್ಥಿತಿಯ ಪರಿಸ್ಥಿತಿಯಿಂದಾಗಿ ಸುಂದರ್‌ಲಾಲ್ ಬಹುಗುಣರ ಕ್ರಿಯಾತ್ಮಕ ಭಾಗವಹಿಸುವಿಕೆಗೆ ಕಾರಣವಾಯಿತು. ೧೮೧೫ರಲ್ಲಿ ನೇಪಾಳ ವಿರುದ್ಧ ಆದ ಬ್ರಿಟೀಷರ ಯುದ್ಧದ ನಂತರ ಬ್ರಿಟೀಷರು ಕುಮಾವೋ ಮತ್ತು ಗಡ್ವಾಲ್‌ದ ಹೆಚ್ಚು ಪ್ರದೇಶವನ್ನು ಆಕ್ರಮಿಸಿದರು. ಈ ಸಮಯದಲ್ಲಿಯೇ ಗಡ್ವಾಲ್‌ವು ವಿಭಜಿಸಲ್ಪಟ್ಟಿತು. ಪೂರ್ವ ಭಾಗದ ಭೂಪ್ರದೇಶ ಅಂದರೆ ಅಲಕ್‌ನಂದ ನದಿಯ ಪೂರ್ವಭಾಗ ಬ್ರಿಟೀಷರ ನೇರ ಆಡಳಿತಕ್ಕೆ ಒಳಗಾಯಿತು. ಪಶ್ಚಿಮಭಾಗ ತೆಹರಿ ಗಡ್ವಾಲ್ ಎಂಬ ದೇಶೀಯ ಸಂಸ್ಥಾನವಾಯಿತು. ಆ ಸ್ಥಾನದ ರಾಜನು ತನ್ನ ಆಡಳಿತದ ಹಕ್ಕಿನ ಇತಿಹಾಸವನ್ನು ಸಾವಿರ ವರ್ಷಕ್ಕಿಂತಲೂ ಹಿಂದಿನದು ಎಂದು ಹೇಳುತ್ತಿದ್ದ. ರಾಮಚಂದ್ರಗುಹಾ ಹೇಳುವಂತೆ ಗಡ್ವಾಲಿನ ರಾಜಮನೆತನ ಉತ್ತರಭಾರತದ ಅತ್ಯಂತ ಹಳೆಯದು. ಅಲಕ್‌ನಂದ ನದಿಯ ಉಗಮ ಸ್ಥಾನದಲ್ಲಿ ಇರುವ ಬದರಿನಾಥ ದೇವಸ್ಥಾನದ ಧಾರ್ಮಿಕ ಮುಖ್ಯಸ್ಥ ಗಡ್ವಾಲದ ರಾಜನೆಂದು ಜನರು ಭಾವಿಸಿದ್ದರು. ರಾಜನಿಗೆ 'ಬೇಲಾನಂದ ಬದರಿನಾಥ' ಎಂಬ ಪದವಿಯನ್ನು ಕೊಡಲಾಗಿತ್ತು. ಇದರ ಅರ್ಥ ಮಾತನಾಡುವ ಬದರಿನಾಥ ಅಥವಾ ದೇವರು ಎಂದು ರಾಜನ ಆಡಳಿದಲ್ಲಿ ಅಧಿಕಾರಿಗಳದೇ ಕೈವಾಡ ಇರುತ್ತಿತ್ತು. ಅನೇಕ ಸಲ ಅದರ ದುರುಪಯೋಗವು ಆಗುತ್ತಿತ್ತು. ರಾಜನಿಗೆ ದೈವತ್ವದಸ್ಥಾನವನ್ನು ಕೊಡಲಾಗಿದ್ದರಿಂದ ಅವನ ಆಡಳಿತದ ಬಗ್ಗೆ ಉಂಟಾಗುತ್ತಿದ್ದ ಅಸಂತೋಷವು ಕ್ವಚಿತ್ತಾಗಿ ವಿರೋಧಾತ್ಮಕ ಪ್ರತಿಭಟನೆಯ ರೂಪವನ್ನು ಪಡೆಯುತ್ತಿತ್ತು. ಬ್ರಿಟೀಷ್ ಪ್ರಭಾವಕ್ಕಿಂತ ಮುಂಚೆ ರೈತರು ತಮ್ಮ ಅಸಂತೋಷವನ್ನು

ದಂಡಖ್ ಎಂಬ ರೀತಿಯಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದರು. ತನ್ಮೂಲಕ ಅವರು ರಾಜನ ಗಮನವನ್ನು ಅಧಿಕಾರಿಗಳ ತಪ್ಪುಗಳ ಕಡೆಗೆ ಸೆಳೆಯುತ್ತಿದ್ದರು. ಅಧಿಕಾರಿಗಳು ಜಾರಿಗೆ ತರುತ್ತಿದ್ದ ಹೊಸ ನಿಯಮಗಳೊಂದಿಗೆ ಅಸಹಕರಿಸುವುದೇ ದಂಡಖ್ ವಿಧಾನ. ಹೊಸ ನಿಯಾಮವಳಿಗಳನ್ನು ಒಪ್ಪದೆ ಇರುವುದು ಮತ್ತು ತೆರಿಗೆಗಳನ್ನು ಕೊಡದೆ ಇರುವುದು ಕೂಡ ಆ ವಿಧಾನದ ಲಕ್ಷಣವಾಗಿದ್ದವು. ಅಲ್ಲದೆ ಆ ಸ್ಥಳದಿಂದ ರಾಜಧಾನಿಯವರಿಗೆ ಜಾಥಾ ಹೋಗುತ್ತಿದ್ದರು ಮತ್ತು ರಾಜನ ಭೇಟಿಗಾಗಿ ಆಗ್ರಹಿಸುತ್ತಿದ್ದರು. ರಾಜನ ಭೇಟಿಯ ನಂತರ ಮತ್ತು ಅವರ ಸಮಸ್ಯೆಯ ನಿವಾರಣೆಯ ವಚನದ ನಂತರ ಅವರು ಹಿಂದಿರುಗುತ್ತಿದ್ದರು.

ಪರಂಪರಾಗತವಾಗಿ ಬಂದ ಪ್ರತಿಭಟನೆಯ ಹಕ್ಕಿನ ರೂಪದಲ್ಲಿ ದಂಡಖ್ ಇತ್ತು ಎಂಬುದಾಗಿ ಗುಹಾ ಹೇಳುತ್ತಾರೆ. ತಪ್ಪು ಮಾಡಿದ ಅಧಿಕಾರಿಯನ್ನು ಗುರುತಿಸಿದ ನಂತರ ಅವನಿಗೆ ಸೂಕ್ತ ಶಿಕ್ಷೆಯಾದ ನಂತರವೆ ಪ್ರತಿಭಟನೆಯು ಕೊನೆಗೊಳ್ಳುತ್ತಿತ್ತು. ಅರಣ್ಯದೊಂದಿಗಿನ ತಮ್ಮ ಸಂಬಂಧದ ಬಗ್ಗೆ ನಿರ್ಬಂಧಗಳು ಹೆಚ್ಚಾದಾಗ ಇಂಥ ಪ್ರತಿಭಟನೆಗಳು ನಡೆಯುತ್ತಿದ್ದವು. ಆದರೆ ವಿರೋಧದ ಈ ಪರಂಪರೆ ೧೯೩೦ ರ ಸುಮಾರಿನಲ್ಲಿ ಹೊಸ ತಿರುವು ಪಡೆಯಿತು. ಆದಾಗ್ಯೂ ದಂಡಖ್ ಎಂಬ ಪ್ರತಿಭಟನೆಯ ರೂಪವು ಬಹಳ ಕಾಲದವರೆಗೆ ನೆನೆಯಲ್ಪಡುವುದು. ಬ್ರಿಟೀಷ್ ಭಾರತದಿಂದ ಬಂದಂಥಹ ಅಧಿಕಾರಿಗಳು ದಂಡಖ್ ಪರಂಪರೆಯನ್ನು ಅರ್ಥೈಹಿಸಿಕೊಳ್ಳಲು ಅಸಮರ್ಥರಾಗುತ್ತಿದ್ದರು. ಯಾವುದೇ ಬೃಹತ್ ಅಸಂತೋಷದ ಮೆರವಣಿಗೆಯನ್ನು ಅವರು ವಿರೋಧಾತ್ಮಕ ಬಂಡಾಯವೆಂದೇ ಭಾವಿಸುತ್ತಿದ್ದರು.

–ಮುಂದುವರಿಯುವುದು

ಅನು: ಸುರೇಂದ್ರ ಕೌಲಗಿ

ಉಪ್ಪು, ಧೂಳು ಮತ್ತು ಹೂವು

(ಕಳೆದ ಸಂಚಿಕೆಯಿಂದ ಮುಂದುವರೆದುದು) –ಸುಮಂಗಲ್ ಪ್ರಕಾಶ

{ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ೧೯೩೦ ಮಾರ್ಚ್ ೧೨ ರಿಂದ ಏಪ್ರಿಲ್ ೫ನೇ ತಾರೀಖಿನವರೆಗೆ ಮಹಾತ್ಮ ಗಾಂಧೀಯವರು ನಡೆಸಿದ ಉಪ್ಪಿನ ಸತ್ಯಾಗ್ರಹಕ್ಕೆ ಐತಿಹಾಸಿಕ ಮಹತ್ವವಿದೆ. ದಾಂಡಿಯಾತ್ರೆ ಎಂದೇ ಪ್ರಸಿದ್ಧವಾಗಿರುವ ಆ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದ ಲೇಖಕರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.}–ಸಂ

ಯಾವ ಸಮಯದಲ್ಲಿ ಯಾತ್ರೆ ಪ್ರಾರಂಭವಾಯಿತೋ ಆ ಸಮಯದಲ್ಲಿ ಇದ್ದಂಥ ಜನ ದಟ್ಟನೆಯು ನೋಡಬೇಕಾದಂತಾಗಿತ್ತು. ಸ್ವಯಂಸೇವಕರು ಪರಸ್ಪರ ಕೈ ಹಿಡಿಯುವ ಮೂಲಕ ಸರಪಣಿಯನ್ನು ನಿರ್ಮಿಸಿದ್ದರು ಮತ್ತು ಯಾತ್ರಿಗಳ ಜೊತೆಗೆ ನಿರಂತರವಾಗಿ ನಡೆಯುತ್ತಿದ್ದರು. ಈ ಸರಪಣಿಯ ಭಾಗ ಎಲ್ಲಿಯಾದರೂ ಕಿತ್ತು ಹೋದರೆ ಯಾತ್ರೆಯಲ್ಲಿದ್ದವರಲ್ಲಿಯೇ ಕೆಲವರು ಸರಪಣಿಯ ಭಾಗವಾಗುತ್ತಿದ್ದರು. ನಮ್ಮ ಜೊತೆಗಾರರಲ್ಲಿ ಯಾರಾದಾದರೂ ಪದಾರ್ಥ ಗಮನವಿಲ್ಲದೆ ಚೀಲದಿಂದ ಕೆಳಗೆ ಬಿದ್ದರೆ ಅದನ್ನು ಎತ್ತಿಕೊಳ್ಳುವುದರ ಬಗ್ಗೆ ಯೋಚನೆ ಮಾಡಲು ಕೂಡ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಒಂದು ಕ್ಷಣ ನಿಂತರು ಆ ಗತಿಶೀಲ ಗುಂಪಿನ ಕಾರಣದಿಂದ ನಿಲ್ಲುವುದಾಗಲೀ, ಬಗ್ಗುವು ದಾಗಲೀ, ಸರ್ವತಾ ಅಸಂಭವವಾಗಿತ್ತು. ೩–೪ ಮೈಲಿ ನಡೆದ ನಂತರ ನಾವು ಎಲಿಸಬ್ರಿಡ್ಜ ಹತ್ತಿರ ತಲುಪಿದೆವು. ಸಾಬರಮತಿ ನದಿಯ ಮೇಲಿನ ಈ ವಿಶಾಲ ಸೇತುವೆ ಸಾಬರಮತಿಗೆ ಹೋಗುವ ರಸ್ತೆಯನ್ನು ಅಹಮದಬಾದಿಗೆ ಹೋಗುವ ರಸ್ತೆಗೆ ಜೋಡಿಸುತ್ತಿತ್ತು. ಈ ಸೇತುವೆಯನ್ನು ದಾಟುತ್ತಲೆ ಅಹಮದಬಾದ ನಗರ ಪ್ರಾರಂಭವಾಗುತ್ತದೆ. ಈ ಸೇತುವೆ ಮೇಲೆ ಅತ್ಯಧಿಕ ಜನಸಂದಣಿ ಇತ್ತು. ಆದ್ದರಿಂದ ಈ ಸೇತುವೆ ಮೂಲಕ ಗಾಂಧೀಯವರನ್ನು ಕರೆದುಕೊಂಡು ಹೋಗುವುದೆಂದರೇ ಅಪಾಯದ ಸಂಗತಿಯೇ ಆಗಿತ್ತು. ಆದ್ದರಿಂದ ಸಾಬರಮತಿ ನದಿಯನ್ನು ನಡೆದುಕೊಂಡೆ ಹೋಗುವುದು ಒಳ್ಳೆಯದೆಂದು ತಿಳಿಯಲಾಯಿತು. ಸೇತುವೆಯ ಸ್ವಲ್ಪದೂರ ಹೋಗಿ ನಾವು ನದಿಯ ವಿಶಾಲ ಮರಳು ತೀರ ಸೇರಿದೆವು. ಬೇಸಿಗೆ ಪ್ರಾರಂಭವಾಗಿತ್ತು. ನದಿಯಲ್ಲಿ ಎಲ್ಲಿಯೂ ಮಂಡಿಗಿಂತ ಹೆಚ್ಚು ಆಳ ಉದ್ದ ನೀರು ಇರಲಿಲ್ಲ.

ಎಲ್ಲಿ ಹೆಚ್ಚು ಸುಲಭವಾಗಿ ನದಿಯನ್ನು ದಾಟಬಹುದಾಗಿತ್ತೋ ಅಲ್ಲಿಗೆ ಹೋದೆವು. ನಾನು ಸಹಜವಾಗಿ ಎಡ–ಬಲ ಹಿಂದು–ಮುಂದಕ್ಕೆ ನೋಡಿದರೆ ಆ ಅಪಾರ ಜನಸಮೂಹದ ವಿಶಾಲತೆಯಿಂದ ಸ್ತಂಭಿಭೂತನಾದೆ.' ಡೋಲಾಕನ್ನು ನದಿಯ

ಒಂದು ತೀರದಿಂದ ಇನ್ನೊಂದು ತೀರದವರೆಗೆ ಮನುಷ್ಯರ ತಲೆಯ ಮೇಲಿಂದಲೇ ಡೋಲಾಕ್ ಸಾಗಿಸಲಾಗುತ್ತಿತ್ತು. ಅದು ಎಲ್ಲಿಯೂ ಕೆಳಗೆ ಬಿಡುತ್ತಿರಲಿಲ್ಲ. ಇಷ್ಟೊಂದು ಜನರ ಗದ್ದಲವಿತ್ತು.

ನದಿಯನ್ನು ದಾಟಿ ನಾವು ಪ್ರಾಯಃ ಹಳ್ಳಿಯನ್ನು ತಲುಪಿ ಬಿಟ್ಟಿದ್ದೆವು. ಅಹಮದಾಬಾದ ನಗರ ಒಂದು ಕಡೆಗೆ ಉಳಿದು ಬಿಟ್ಟಿತು. ನಮ್ಮ ಮೊದಲನೇಯ ಶಿಬಿರ ಯಾವ ಹಳ್ಳಿಯಲ್ಲಿತ್ತೋ ಆ ಹಳ್ಳಿ ಸಾಬರಮತಿ ಆಶ್ರಮದಿಂದ ೧೨ ಮೈಲಿ ದೂರದಲ್ಲಿತ್ತು. ಸುಮಾರು ೪ ಮೈಲಿ ನಾವು ನಡೆದಾಗಿತ್ತು. ನಮ್ಮೊಂದಿಗೆ ಹೆಚ್ಚು ಜನರು ಇದ್ದುದರಿಂದ ಅತೀಯಾದ ಧೂಳು ಉಂಟಾಗಿ ಅಕ್ಕಪಕ್ಕ ಸ್ವಲ್ಪದೂರವೂ ನಮಗೆ ಯಾವುದನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಉಸಿರಾಡಲು ಕೂಡ ಕಷ್ಟವಾಗುತ್ತಿತ್ತು.

“ನೀವು ಇನ್ನು ಹಿಂದುರುಗಿ ಎಂದು ಗಾಂಧೀಜಿ ಜನಸಮೂಹಕ್ಕೆ ಪ್ರಾರ್ಥಿಸಿಕೊಂಡರು: ಆದರೆ ಜನಸಂದಣಿಯ ಉತ್ಸಾಹ ಬಹಳಷ್ಟು ಇದ್ದುದರಿಂದ ಅಷ್ಟು ಬೇಗನೆ ಅದು ಕಡಿಮೆಯಾಗಲು ಸಾಧ್ಯವಿರಲಿಲ್ಲ.

ಸ್ವಲ್ಪದೂರ ನಾವು ಮೊದಲಿನಂತೆಯೇ ಮುನ್ನಡೆದವು. ಸಹಜವಾಗಿ ಇನ್ನೊಂದು ಹೊಸ ಸಮಸ್ಯೆ ಉದ್ಭವಿಸಿತು. ನದಿಯ ಆಚೆಗೆ ಸಿನಿಮಾ ಕಂಪನಿಗಳು ದೊಡ್ಡ ದೊಡ್ಡ ಮೋಟಾರ್ ಮತ್ತು ಲಾರಿಗಳೊಂದಿಗೆ ಸಾಮಾನುಗಳ ಜೊತೆಗೆ ಹಾಜರಿದ್ದವು. ಸಿನಿಮಾದವರು ನಮ್ಮನ್ನು ಗುರಿಯಾಗಿರಿಸಿಕೊಂಡರು. ಸಿನಿಮಾದವರಿಗೆ ನಮ್ಮ ಯಾತ್ರೆಯ ಎಲ್ಲ ಹಂತಗಳನ್ನು ಚಿತ್ರಿಸಿಕೊಳ್ಳಬೇಕೆಂಬುದು ಅವರ ಉದ್ದೇಶವಾಗಿತ್ತು. ಅದಕ್ಕಾಗಿ ಅವರು ಕೆಲವೊಂದು ಸಲ ನಮ್ಮ ಮುಂದೆ ಹೋಗುವುದು ಮತ್ತು ಕೆಲವೊಂದು ಸಲ ಹಿಂದಿರುಗುವುದು ಅವರಿಗೆ ಅನಿವಾರ್ಯವಾಗಿತ್ತು. ಕೆಲವೊಮ್ಮೆ ಲಗು ಬಗೆಯಿಂದ ಓಡಿ ಬಂದು ಪಕ್ಕದಲ್ಲಿ ಇರುತ್ತಿದ್ದರು. ಯಾವಾಗ ಸಿನಿಮಾದವರ ಈ ಮೋಟಾರ್ ಮತ್ತು ಲಾರಿಗಳು ನಾಲ್ಕೂ ಕಡೆಗೆ ಓಡಾಡಲು ಆರಂಭಿಸಿದವೋ ಆಗ ನಮ್ಮ ಇಡೀ ದಾರಿ ಧೂಳಿನಿಂದ ಕೂಡಿ ನಮ್ಮ ಕಣ್ಣುಗಳು ಪೂರ್ಣ ಕೆಂಪಾದವು, ಉಸಿರಾಡುವಾಗ ಗಾಳಿಗಿಂತಲೂ ಧೂಳಿನ ಅಂಶವೇ ವಿಶೇಷವಾಗಿರುತಿತ್ತು. ಸೀನಿ ಸೀನಿ ನಮಗೆ ಕಷ್ಟವಾಗಲಾರಂಭಿಸಿತು.

ಕೆಲ ಮೈಲಿ ದೂರ ನಡೆದ ನಂತರ ಗಾಂಧೀಜಿಯವರಿಗೆ ನಿಲ್ಲಬೇಕಾಯಿತು. ಅವರು ನಿಂತದ್ದರಿಂದ ಎಲ್ಲರೂ ನಿಂತು ಬಿಟ್ಟರು. ಗಾಂಧೀಜಿ ಮುಖ ಹಿಂದಿರುಗಿ ನೋಡಿ ಜನರ ಕಡೆಗೆ ಮುಖಮಾಡಿ ನಿಂತು ಬಿಟ್ಟರು. ಗಾಂಧೀಜಿಯವರ ಅದೆಂಥಾ ಮುಖ! ಅವರ ಶರೀರದ ಯಾವ ಭಾಗ ಕಾಣುತ್ತಿತ್ತೋ ಆ ಭಾಗದ ಚರ್ಮ ಲವಲೇಶವು ಕಾಣುತ್ತಿರಲಿಲ್ಲ. ಅವರು ಮಣ್ಣಿನಿಂದ ಮಾಡಿದ ಜೀವಂತ ಮೂರ್ತಿಯಂತೆ

ಕಾಣುತ್ತಿತ್ತು. ರೆಪ್ಪೆ ಅಲುಗಾಡಿದಾಗಲೆ ಆ ತೇಜಸ್ವಿ ಹೊಳೆಯುವ ಪ್ರಕಾಶ ಮಾನವಾದ ಕಣ್ಣುಗಳು ಕಾಣುತ್ತಿದ್ದವು. ಈ ರೀತಿ ಇಡೀ ಮಣ್ಣಿನ ಒಂದು ರಾಶಿಯೇ ಅವರ ಶರೀರದ ಮೇಲೆ ಸೇರಿಕೊಂಡಿತ್ತು. ಇದುವರೆಗೆ ನಾವು ಎದುರು ನೋಡುತ್ತಲೇ ಹೋಗುತ್ತಿದ್ದೆವು. ಜೊತೆಗಾರಲ್ಲಿಯ ಯಾರ ಮುಖವನ್ನೂ ನೋಡಿರಲಿಲ್ಲ. ಗಾಂಧೀಜಿಯವರ ಮುಖದ ಮೇಲೆ ಇಷ್ಟೊಂದು ಧೂಳು ಇರುವುದನ್ನು ನೋಡಿಯಾದ ಮೇಲೆ ನನ್ನ ಜೊತೆಯವರ ಕಡೆಗೆ ಬಗ್ಗಿ ಅವರ ಮುಖ ನೋಡಬೇಕೆಂದೆನಿಸಿತು. ಪ್ರತಿಯೊಬ್ಬರು ಗಾಂಧೀಜಿಯವರ ಪ್ರತಿರೂಪವಾಗಿರುವುದನ್ನು ನೋಡಿ ನಾನು ವಿಸ್ಮಿತನಾದೆ. ನನ್ನ ಮುಖದ ಮೇಲೆ ಕೈಗಳ ಮೇಲೆ ಕಾಲುಗಳ ಮೇಲೆ ಮಣ್ಣು ಇತ್ತು.

ಅಲ್ಲಿಯೇ ಒಂದು ದೊಡ್ಡ ಮರವಿತ್ತು. ಅದರ ಕೆಳಗೆ ಗಾಂಧೀಜಿ ಡೇರೆ ಹಾಕಿದರು ಮತ್ತು ಎಲ್ಲ ಜನರಿಗೆ ಕುಳಿತುಕೊಳ್ಳಲು ಹೇಳಿದರು. ಹತ್ತಿರದಲ್ಲಿಯೇ ಒಂದು ಕೊಳವಿತ್ತು. ನಾವೆಲ್ಲರೂ ಅಲ್ಲಿಗೆ ಹೋಗಿ ನಮ್ಮ ಶರೀರವನ್ನು ತೊಳೆದುಕೊಂಡೆವು. ಜೊತೆ ಬರುತ್ತಿದ್ದ ಜನಸಮೂಹಕ್ಕೆ ಹಿಂದಿರುಗಿರೆಂದು ಬಾಪು ಪ್ರಾರ್ಥಿಸುತ್ತಾ ಒಂದು ಚಿಕ್ಕ ಭಾಷಣ ಮಾಡಿದರು. ಅದಾದ ನಂತರ ಯಾತ್ರೆ ಪುನಃ ಪ್ರಾರಂಭವಾಯಿತು. ಕೆಲವು ಹಠಮಾರಿ ಜನರನ್ನು ಬಿಟ್ಟು ಉಳಿದ ಎಲ್ಲ ಜನರು ಬಾಪುನ ಪ್ರಾರ್ಥನೆಯಿಂದಾಗಿ ಮುಂದುವರೆಯುವುದನ್ನು ಬಿಟ್ಟರು. ಅತಿಯಾದ ಧೂಳಿನಿಂದ ನಮಗೆ ಸ್ವಲ್ಪ ಬಿಡುಗಡೆಯಾಯಿತು.

ನಾವು ನಮ್ಮ ಮೊದಲನೇ ಶಿಬಿರವನ್ನು ತಲುಪುವ ಮೊದಲೇ ದಾರಿಯಲ್ಲಿ ಅನೇಕ ಹಳ್ಳಿಗಳು ಸಿಕ್ಕವು. ಆ ಹಳ್ಳಿಯ ಜನರು ಬಾಪೂನ ಸ್ವಾಗತವನ್ನು ಅದ್ದೂರಿಯಾಗಿಯೇ ಮಾಡಿದರು. ಊರಿನಿಂದ ಸ್ವಲ್ಪ ಮೊದಲೇ ದೂರದಲ್ಲಿ ಗ್ರಾಮಸ್ಥರು ಹಾಡು ಹೇಳುತ್ತಾ ಭಾಜಭಜತ್ರಿಯೊಂದಿಗೆ ನಮ್ಮನ್ನು ಭೇಟಿ ಯಾಗುತ್ತಿದ್ದರು.

ಗ್ರಾಮದ ಮುಖ್ಯಸ್ಥ ಗಾಂಧೀಜಿಯವರ ಹಣೆಯ ಮೇಲೆ ಕುಂಕುಮ ಇಟ್ಟು ಕತ್ತಿಗೆ ಹಾರ ಹಾಕುತ್ತಿದ್ದ. ಸ್ತ್ರೀಯರು ಅವರಿಗೆ ಆರತಿ ಮಾಡುತ್ತಿದ್ದರು ಮತ್ತು ಶುಭ ಸೂಚಕವಾಗಿ ಅವರ ಕೈಯಲ್ಲಿಡುತ್ತಿದ್ದರು. ನಮ್ಮ ಶಿಬಿರ ಯಾವ ಊರಿನಲ್ಲಿ ಇತ್ತೋ ಅದರ ಸ್ವಾಗತಿಸುವ ಗುಂಪು ಬಹುದೊಡ್ಡದಾಗಿರುತ್ತಿತು ಮತ್ತು ಸ್ವಾಗತಕ್ಕಾಗಿ ಬಹಳ ಮುಂಚೆಯೇ ಬಂದಿರುತ್ತಿತ್ತು. ಗಾಂಧೀಜಿಯವರ ಹಣೆಯ ಮೇಲೆ ಎಷ್ಟೋ ಜನರು ಕುಂಕಮ ಹಚ್ಚುತ್ತಿದ್ದರು. ಕತ್ತಿನಲ್ಲಿ ಹಾರ ಹಾಕುತ್ತಿದ್ದರು. ಇದೇ ರೀತಿ ಇಡೀ ಯಾತ್ರೆಯಲ್ಲಿ ಬಾಪುವಿಗೆ ಸ್ವಾಗತ ಆಗುತ್ತಲೇ ಇತ್ತು.

–ಮುಂದುವರಿಯುವುದು

– ಅನು ಸು.ಕೌ

ಇಫ್ತಾರ್ ಕೂಟ ಒಂದು ವಿಮರ್ಶೆ

- ಅಬ್ದುಲ್ ರೆಹಮಾನ್ ಪಾಷ

ಅರೇಬಿಕ್ ಭಾಷೆಯಲ್ಲಿ "ಇಫ್ತಾರ್" ಎಂದರೆ (ಬ್ರೇಕ್‌ಫಾಸ್ಟ್) ಉಪವಾಸವನ್ನು ಮುರಿಯುವುದು ಎಂದರ್ಥ. ನಿತ್ಯ ಮುಂಜಾನೆ ಉಪಹಾರ ಸೇವಿಸುವುದಕ್ಕೂ ಇಫ್ತಾರ್ ಎನ್ನಬಹುದು. ಆದರೆ, ರಂಜಾನ್ ತಿಂಗಳ ಸಂದರ್ಭದಲ್ಲಿ ಇಫ್ತಾರ್ ಎಂದರೇ ಇಡೀ ನದಿ ವಿಧಿ ಬದ್ಧವಾಗಿ ಅನುಸರಿಸಿದ ಕಠಿಣ ಉಪವಾಸವನ್ನು ಅಷ್ಟೆ ವಿಧಿಬದ್ಧವಾಗಿ ಮುಕ್ತಾಯಗೊಳಿಸಿ ಆ ಹೊತ್ತಿಗೆ ಲಘು ಆಹಾರವನ್ನು ಸೇವಿಸುವ ಒಂದು ಕ್ರಿಯೆ. ಇದನ್ನು ಮಗ್ರಿಬ್(ಸೂರ್ಯಾಸ್ತದ ನಂತರದ) ನಮಾಜಿಗಿಂತ ಸ್ವಲ್ಪ ಮುಂಚೆ ನಮಾಜಿಗೆ ಹೋಗುವ ಶುದ್ಧತೆಯ ಸಿದ್ಧತೆಯೊಂದಿಗೆ ಮಾಡಲಾಗುತ್ತದೆ.

ಸಮುದಾಯದವರು ಸಂಜೆ ಹೊತ್ತು ತಮ್ಮ ಮನೆಗಳಲ್ಲಿ ತಯಾರಿಸಿದ ವಿವಿಧ ಬಗೆಯ ತಿನಿಸು, ಹಣ್ಣುಹಂಪಲು, ದ್ರಾಕ್ಷಿ ಇತ್ಯಾದಿಗಳನ್ನು ಇಫ್ತಾರ್-ಗಾಗಿ ತಮ್ಮ ಮಸೀದಿಗೆ ಕಳಿಸಿಕೊಡುತ್ತಾರೆ. ಅಲ್ಲಿ ರಾಜ್ದಾರರು (ರೋಜ಼ಾ ಇರುವವರು) ಇದನ್ನು ಸೇವಿಸಿ ಇಫ್ತಾರ್ ಮುಗಿಸುತ್ತಾರೆ. ನಾವು ಚಿಕ್ಕವರಿರುವಾಗ ಕೆಲವರು ರಂಜ಼ಾನ್ ತಿಂಗಳಲ್ಲಿ ರೋಜ಼್ದಾರರನ್ನು ಊಟಕ್ಕೆ ಕರೆಯುವುದು ಪುಣ್ಯದ ಕೆಲಸ ಎಂದು ಭಾವಿಸುತ್ತಿದ್ದರು. ಮಸೀದಿಗೆ ಹೋಗಿ ಅಲ್ಲಿ ಇರುವವರಿಗೆಲ್ಲ (ಎಲ್ಲರೂ ಸಾಮಾನ್ಯವಾಗಿ ರೋಜ಼ಾ ಇದ್ದವರು) ಊಟಕ್ಕೆ ಬರುವಂತೆ ಔತಣ ನೀಡುತ್ತಿದ್ದರು. ಕರೆದವರ ಮನೆಗೇ ಹೋಗಿ ರೋಜ಼್ದಾರರು ಊಟ ಸೇವನೆ ಮಾಡುತ್ತಿದ್ದರು. ಮನೆ ಚಿಕ್ಕದೋ ದೊಡ್ಡದೋ ಅಲ್ಲಿಯೇ ಮಾಡಿದ ಅಡುಗೆಯನ್ನು ಇದ್ದಷ್ಟು ಜಾಗದಲ್ಲಿ ಅನುಸರಿಸಿಕೊಂಡು ವಿವಿಧ ಪಂಕ್ತಿಗಳಲ್ಲಿ ಕುಳಿತು ಊಟ ಮಾಡಿ ಮನೆಯವರನ್ನು ಹರಸುವುದು ಒಂದು ಬಗೆಯ ಸಂಭ್ರಮದ ಸಂಗತಿಯಾಗಿತ್ತು. ಇದನ್ನು "ಇಫ್ತಾರ್ ಕೂಟ" ಎಂದು ಕರೆಯಬಹುದು. ಇದು ಮೂಲಭೂತವಾಗಿ ಧಾರ್ಮಿಕ ಆಚರಣೆ. ಈಗ, ಮಸೀದಿಯ ಬಳಿಯಲ್ಲಿಯೇ ಅಡುಗೆ, ಊಟದ ವ್ಯವಸ್ಥೆ ಮಾಡಿದ್ದು, ಅಪೇಕ್ಷೆ ಇರುವವರು ಹಣ ಕೊಟ್ಟರೆ ಸಾಕು ಎಲ್ಲವೂ 'ವ್ಯವಸ್ಥೆ' ಮಾಡಲಾಗುತ್ತದೆ. ಇದರಿಂದ ಮೊದಲಿದ್ದ ಒಂದು ಬಗೆಯ ಭ್ರಾತೃತ್ವ ಕಡಿಮೆಯಾಗಿ ಇದೊಂದು 'ಇವೆಂಟ್' ಆಗಿ ಪರಿಣಮಿಸಿದೆ. ಹಣಕೊಟ್ಟು ಪುಣ್ಯ ಕೊಂಡುಕೊಳ್ಳುವ ವ್ಯಾಪಾರವಾಗಿದೆ.

ಬರಬರುತ್ತಾ ಇಫ್ತಾರ್ ಕೂಟ ಎನ್ನುವುದು ಹೆಚ್ಚು ಸಾರ್ವತ್ರಿಕ ಇವೆಂಟ್ ಆಗಿರುತ್ತಿರುವುದನ್ನು ನಾವು ಕಾಣುತ್ತೇವೆ. ಮುಸ್ಲಿಮ್ ರಾಜಕೀಯ ನಾಯಕರು ತಮ್ಮ ಪಕ್ಷಬಾಂಧವರನ್ನು ಅಹ್ವಾನಿಸಿ "ಇಫ್ತಾರ್ ಕೂಟ" ಎಂಬ ಹೆಸರಿನಲ್ಲಿ ಔತಣ ಕೂಟವನ್ನು ನಡೆಸುತ್ತಿದ್ದಾರೆ. ಇಲ್ಲಿ ಬರುವ ಅನ್ಯ ಮತಸ್ಥರು ತಲೆಗೊಂದು ಟೋಪಿ, ಹೆಗಲದ ಮೇಲ ಒಂದು ಚೌಕಳಿಂಯ ಸ್ಕಾರ್ಫ್ ಹಾಕಿಕೊಳ್ಳುತ್ತಾರೆ. ಇವರು

ಮುಸ್ಲಿಮರಾಗಬೇಕಾಗಿಲ್ಲ. ಇವರು ರೋಜ಼ಾದಾರರೂ ಆಗಿರಬೇಕಾಗಿಲ್ಲ. ಆದರೂ ಇದು "ಇಫ್ತಾರ್ ಕೂಟ"! ಮುಸ್ಲಿಮ್ ನಾಯಕರೊಬ್ಬರು ತನ್ನ ಪ್ರತಿಷ್ಠೆಗಾಗಿ ರಂಜ಼ಾನ್ ತಿಂಗಳ ಸಂದರ್ಭವನ್ನು ಬಳಸಿಕೊಳ್ಳುತ್ತಿರಬಹುದು. ಆದರೆ ಜಾತ್ಯತೀತ ಸರಕಾರದ ಪ್ರತಿನಿಧಿಗಳಾದ ಮುಖ್ಯಮಂತ್ರಿಗಳು, ರಾಜ್ಯಪಾಲರು, ರಾಷ್ಟ್ರಾಧ್ಯಕ್ಷರೂ ಅಧಿಕೃತವಾಗಿ "ಇಫ್ತಾರ್ ಕೂಟ"ಗಳನ್ನು ನಡೆಸುವುದು ನನಗೆ ಅರ್ಥವಾಗುವ ಸಂಗತಿಯಲ್ಲ! ನನಗೆ ಇನ್ನೂ ಆಶ್ಚರ್ಯವಾಗುವ ಸಂಗತಿಯೆಂದರೆ, ರಂಜ಼ಾನ್ ಮತ್ತು ಬಕ್ರೀದ್ ಹಬ್ಬದ ದಿನ ಈದ್ಗಾ ಮೈದಾನದಲ್ಲಿ ಮುಸ್ಲಿಮ್ ಸಮುದಾಯದ ಪುರುಷರು ಮತ್ತು ಮಕ್ಕಳು ಸಾಮೂಹಿಕ ನಮಾಜ್ ಮಾಡುವಾಗಲೂ ಮುಸ್ಲಿಮೇತರ ನಾಯಕರೂ ಟೋಪಿ ಹಾಕಿಕೊಂಡು ಅವರೊಂದಿಗೆ ನಮಾಜ್ ಮಾಡುವುದು! ನಮಾಜ್ ಮಾಡುವಾಗ ಆರಂಭದಲ್ಲಿಯೇ ಉಚ್ಚರಿಸಲಾಗುವ ಶ್ಲೋಕಗಳಲ್ಲಿ ಒಂದು ಪ್ರಮುಖವಾದ ಅರೇಬಿಕ್ ಶ್ಲೋಕದ ಅರ್ಥ "ಅಲ್ಲಾಹ್‌ನ ಹೊರತು ಅನ್ಯ ಆರಾಧ್ಯರಿಲ್ಲ; ಹಜ಼ರತ್ ಮುಹಮ್ಮದರು ಅಲ್ಲಾಹನ ಪ್ರವಾದಿಗಳು" ಎಂಬುದು.

ಮೂರ್ತಿಗಳ ಪೂಜೆಯನ್ನು ಮಾಡುವ, ಹರಕೆ ಸಲ್ಲಿಸುವ ಇವರು ಇಸ್ಲಾಮ್ ಧರ್ಮದ ಈ ಮೂಲ ತತ್ವವನ್ನು ಒಪ್ಪಿಕೊಳ್ಳುವರೇ? ಇಲ್ಲವಾದರೆ ಇವರ 'ನಮಾಜ್' ಹೇಗೆ ಸಿಂಧುವಾಗುತ್ತದೆ? ಇಂಥ ನಂಬಿಕೆ ಇಲ್ಲದವರೊಂದಿಗೆ ಹೆಗಲಿಗೆ ಹೆಗಲು ಹಚ್ಚಿ ಮಾಡುವ ಇತರ ನಮಾಜೂ ಕೂಡ ಸಿಂಧುವಾಗುವುದೇ? ಎಲ್ಲವೂ ರಾಜಕೀಯ.

ಇತ್ತೀಚೆಗೆ, ಮೊಟ್ಟಮೊದಲ ಬಾರಿಗೆ, ಉಡುಪಿಯ ಮಠದ ಶ್ರೀಗಳು ಮುಸಲ್ಮಾನರನ್ನು "ಇಫ್ತಾರ್ ಕೂಟ"ಕ್ಕೆ ಕರೆದರು. ತಾವೇ ಸ್ವತಃ ಫಲಾಹಾರವನ್ನು ಬಡಿಸಿದರು. ಅಲ್ಲಿ ಆಹ್ವಾನಿತರಾದವರು ತಮ್ಮ ಧರ್ಮದ ಒಂದು ಕ್ರಮವಾಗಿ ಅಲ್ಲಿದ್ದ ಒಂದು ಖಾಲಿ ಜಾಗದಲ್ಲಿ ನಮಾಜು ಮಾಡಲು ಅವಕಾಶ ಕೊಟ್ಟರು. ಇದೆಲ್ಲವೂ ಹಲವು ಬಗೆಯ ಪರವಿರೋಧ ವಾದಗಳಿಗೆ ಎಡೆ ಮಾಡಿಕೊಟ್ಟಿದೆ. ಅದೇ ರೀತಿಯಲ್ಲಿ ರಾಜಕೀಯ ನಾಯಕರುಗಳ ಗ್ರಾಮ ಸಂದರ್ಶನಕ್ಕೆ ಹೋಗಿ ಇತ್ತೀಚೆಗೆ ದಲಿತರ ಮನೆಯಲ್ಲಿ ಉಪಾಹಾರವನ್ನು ಸೇವಿಸುವುದನ್ನೂ ಯಾರೂ ಮಾಡಿಲ್ಲದ ಒಂದು ಘನಕಾರ್ಯವೆಂಬಂತೆ, ದೊಡ್ಡ ಆದರ್ಶವೆಂಬಂತೆ ಬಿಂಬಿಸಲು ನೋಡಿ ವಿವಾದಕ್ಕೆ, ಅಪಹಾಸ್ಯಕ್ಕೆ ಒಳಗಾಗಿದ್ದಾರೆ.

ಇದ್ಯಾವುದೂ ಭ್ರಾತೃತ್ವದ, ಕೋಮುಸೌಹಾರ್ದದ ನಡೆಗಳಲ್ಲ. ಎಲ್ಲವೂ ಕ್ಷುಲ್ಲಕ ರಾಜಕಾರಣ. ನಮ್ಮ ದೇಶದಲ್ಲಿ ಅನೇಕ ಜಾತಿ, ಮತ ಮತ್ತು ಧರ್ಮಗಳಿವೆ. ಒಂದೈವತ್ತು ವರ್ಷಗಳ ಹಿಂದೆ, (ಈಗಲೂ ಕೆಲವು ಕಡೆ ಅಪರೂಪಕ್ಕೆ) ಹಿಂದೂಗಳು ಮುಸ್ಲಿಮರೊಂದಿಗೆ ಮೊಹರಂನ್ನು, ಉರುಸುಗಳನ್ನು ಅವರಂತೆಯೇ ಆಚರಿಸಿದರೆ, ಮುಸಲ್ಮಾನರು ಊರಮ್ಮನ ಜಾತ್ರೆಯನ್ನು, ಗಣೇಶನ ಹಬ್ಬದ ಆಚರಣೆಯಲ್ಲಿ ಸೇರಿಕೊಳ್ಳುತ್ತಿದ್ದರು. ಮುಸ್ಲಿಮರಲ್ಲೂ ಪುರೋಹಿತಶಾಹಿ ಪ್ರಬಲವಾಗಿ ಬೆಳೆದಿದೆ. ಧರ್ಮವನ್ನು ತಮಗೆ ಲಾಭವಾಗುವ ರೀತಿಯಲ್ಲಿ ತಿರುಚಿ ಅರ್ಥೈಸುತ್ತಾ, ಅದರ

ಕುರಿತು ಪ್ರಾಥಮಿಕ ಅರಿವೂ ಇಲ್ಲದ ದುಡಿಯುವ, ಸಾಮಾನ್ಯ ಜನರ ತಲೆ ಕೆಡಿಸಿ, ಸಮುದಾಯಗಳನ್ನು ಒಡೆಯುತ್ತಿದ್ದಾರೆ. ಪುರೋಹಿತಶಾಹಿ ಇದನ್ನು ಧರ್ಮದ ಹೆಸರಿನಲ್ಲಿ ಮಾಡಿದರೆ ಎಲ್ಲಾ ಪಕ್ಷಗಳ ರಾಜಕೀಯ ನಾಯಕರು ಮತಗಳಿಕೆಯ ಸಾಧನವಾಗಿ ಸಮಾಜವನ್ನು ಹೆಚ್ಚು ಹೆಚ್ಚು ಜಾತಿ, ಉಪಜಾತಿ, ಪಂಗಡಗಳನ್ನಾಗಿ ಒಡೆಯುತ್ತಿದ್ದಾರೆ. ನೀವು ಉಳಿದವರಿಗಿಂತ ಬೇರೆ ಎನ್ನುವ ವಿಷ ಬೀಜವನ್ನು ಜನರ ಮನಸ್ಸಿನಲ್ಲಿ ಬಿತ್ತುತ್ತಿದ್ದಾರೆ. ಈ ಹಿಂದೆ ಒಂದೇ ನೆಲ, ಜಲ, ಜನ, ಒಂದೇ ದುಡಿಯುವ ಮಾರ್ಗ, ಒಂದೇ ಜೀವನ ಕ್ರಮವನ್ನು ಅನುಸರಿಸುತ್ತಾ, ಎಲ್ಲ ಸಮಸ್ಯೆಗಳನ್ನು ಸಾಮಾನ್ಯವಾಗಿ ಅನುಭವಿಸುತ್ತಾ, ಎಲ್ಲಾ ಪರಿಹಾರಗಳನ್ನು ಒಟ್ಟಿಗೇ ಸಾಮುದಾಯಿಕವಾಗಿ ಕಂಡುಕೊಳ್ಳುತ್ತಾ ಬೆಳೆದ ಕುಟುಂಬಗಳ ಇಂದಿನ ಪೀಳಿಗೆ ನೆರೆಹೊರೆಯವರ ಮೇಲೆಯೇ ದ್ವೇಷದ ಕಿಡಿಕಾರುವಂತೆ ಮಾಡಿದ್ದಾರೆ. ಒಂದು ಕಡೆ ಈ ಒಡೆದು ಆಳುವ ಕುಟಿಲ ನೀತಿ, ಇನ್ನೊಂದು ಕಡೆ ಈ ಮಾದರಿಯ 'ಕೋಮು ಸೌಹಾರ್ದ'ದ ಪ್ರಹಸನಗಳು- ಎರಡನ್ನೂ ಅದೇ ಜನ ಮಾಡುತ್ತಿದ್ದಾರೆ. ಎರಡೂ ಕಡೆ ಮೋಸ ಹೋಗುತ್ತಿರುವವರು ಮುಗ್ಧ ಜನ ಮಾತ್ರ

ನಿಜವೆಂದರೆ, ಸಂವಿಧಾನದಲ್ಲಿರುವ 'ಜಾತ್ಯತೀತ' ಎಂಬ ಪದವನ್ನು ನಾವು 'ಸರ್ವಧರ್ಮ ಸಮಭಾವದ' ಎಂದು ಅರ್ಥ ಮಾಡಿಕೊಳ್ಳುವ ಬದಲಿಗೆ 'ಧರ್ಮನಿರಪೇಕ್ಷ' ಎಂದು ಅರ್ಥ ಮಾಡಿಕೊಳ್ಳಬೇಕಾಗಿತ್ತು, ಅದನ್ನೇ ಅನುಸರಿಸಬೇಕಾಗಿತ್ತು. ಎಂದರೆ, ಸರಕಾರಕ್ಕೂ ಯಾವುದೇ ಧರ್ಮ ಅಥವಾ ಧಾರ್ಮಿಕ ಆಚರಣೆಗೂ ಸಂಬಂಧವಿಲ್ಲ. ಸರಕಾರ ಭಾರತದ ಎಲ್ಲ ನಾಗರಿಕರಿಗೂ ಸಂಬಂಧ ಪಡುವಂಥ ಶಿಕ್ಷಣ, ಸ್ವಾವಲಂಬನೆ, ಅಭಿವೃದ್ಧಿ ಇತ್ಯಾದಿ ಲೌಕಿಕ ವಿಚಾರಗಳನ್ನಷ್ಟೇ ಕೆಲಸ ಮಾಡಬೇಕು. ಧಾರ್ಮಿಕ, ಪಾರಮಾರ್ಥಿಕ ಗುರಿಗಳು ಆಯಾ ವ್ಯಕ್ತಿ ಮತ್ತು ಸಮುದಾಯಕ್ಕೆ ಸೇರಿದ್ದು. ಇನ್ನೊಂದು ವ್ಯಕ್ತಿ ಮತ್ತು ಸಮುದಾಯದ ಹಕ್ಕುಗಳಿಗೆ ದಕ್ಕೆ ಬಾರದ ಹಾಗೆ ಅವರು ಅದನ್ನು ಅನುಸರಿಸುವ ಅವಕಾಶ ಹೇಗೂ ಸಂವಿಧಾನದಲ್ಲಿದೆ.

ನಿಮಗೆ ಭಾರತದಲ್ಲಿ ಕೋಮು ಸೌಹಾರ್ದ ಬೇಕೇ? ಹಾಗಾದರೆ ದಯವಿಟ್ಟು ಅದಕ್ಕಾಗಿ ಎಂದು ಏನನ್ನೂ ಮಾಡಲು ಹೋಗಬೇಡಿ. ಊಟಕ್ಕೆ ಕರೆಯಿರಿ, ಆದರೆ ಹಬ್ಬಗಳನ್ನು ಬಿಟ್ಟು ಇನ್ಯಾವಾಗಲಾದರೂ ಕರೆಯಿರಿ. ಇದೊಂದು ನೊಬೆಲ್ ಪಾರಿತೋಷಕಕ್ಕೆ ಅರ್ಹವಾದ ಮಹತ್ಸಾಧನೆ ಎಂದು ಬೀಗಬೇಡಿ. ಯಾರು ಯಾರಿಗೆ ಯಾವ ಹಬ್ಬ ಬೇಕೋ, ಏನು ಆಹಾರ ಸೇವಿಸಬೇಕೋ ಅದನ್ನು ಮಾಡಲು ಎಲ್ಲರಿಗೂ ಅವಕಾಶವಿದೆ, ಮಾಡಿಕೊಳ್ಳಲಿ. ಒಂದು ದಶಕದ ಕಾಲ ಇದನ್ನು (ದೇವರ ಮೇಲೆ ಅಲ್ಲ) ಸಂವಿಧಾನದ ಮೇಲೆ ಆಣೆಯಿಟ್ಟು ಪ್ರಾಮಾಣಿಕವಾಗಿ ಎಲ್ಲರೂ ಮಾಡಿ. ನೋಡಿ, ಅದರ ನಂತರ ನಮ್ಮ ಸಮಾಜದ ಮುಖವೇ ಬದಲಾಗಿರುತ್ತದೆ. ನಮ್ಮದು ನಿಜವಾದ ಜಾತ್ಯತೀತ ರಾಷ್ಟ್ರವಾಗಿರುತ್ತದೆ.

ವಿಚಾರಣೆ ರಹಿತ ಮಾನವ ಹತ್ಯೆ (ಲಿಂಚಿಂಗ್) ವಿರುದ್ಧ ಉಪವಾಸ

– ಡಾ॥ ಪ್ರೇಮ್ ಸಿಂಗ್

ದೇಶದ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಯಾವ ವಿಚಾರಣೆಗೂ ಆಸ್ಪದ ಕೊಡದೆ ಅಪರಾಧಿಯನ್ನು ಹತ್ಯೆ ಮಾಡುವ ಜನರ ಗುಂಪಿನ ವಿರುದ್ಧ ಮತ್ತು ಅಂಥ ಹೇಯ ಕೃತ್ಯದ ವಿರುದ್ಧ ನಾನು ಏಳು ದಿನಗಳ ಉಪವಾಸವನ್ನು ಕೈಗೊಂಡಿದ್ದೆ ಆ ಉಪವಾಸವು ಜೂನ್ ೨೫ ರಿಂದ ಜಂತರ್‌ಮಂತರ್ ಸ್ಥಳದಲ್ಲಿ ನಡೆಯಿತು. ಮೊದಲ ದಿನ ಸಮಾಜವಾದಿ ಯುವಜನ ಸಭಾದ ಜನರಲ್ ಸೆಕ್ರೆಟರಿಯವರಾದ ಬಂದನಾ ಪಾಂಡೆಯವರು ನನ್ನ ಜೊತೆ ಉಪವಾಸ ಮಾಡಿದರು. ಉಪವಾಸದ ಅವಧಿಯಲ್ಲಿ ಮೇಧಾ ಪಾಟ್ಕರ್, ಜನತಾದಳ(ಯು), ಜನರಲ್ ಸೆಕ್ರೆಟರಿ ಅರುಣಕುಮಾರ ಶ್ರೀವಾತ್ಸವ, ಡಾ ರಾಜ್‌ಕುಮಾರ ಜೈನ್, ಚರಣ್‌ಸಿಂಗ್‌ರಾಜಪೂತ, ರಮೇಶಚಂದಶರ್ಮ, ಮಹೇಶ, ಶರತ್‌ಅನ್ವರ ಮತ್ತು ಅಕ್ರಮ್ ಹಾಗೂ ಇನ್ನು ಅನೇಕರು ಉಪವಾಸದ ಸ್ಥಳಕ್ಕೆ ಭೇಟಿಕೊಟ್ಟರು. ಉಪವಾಸದ ಸ್ಥಳದಲ್ಲಿ ಹೇಳಲಾಗುತ್ತಿದ್ದ ಕವನಗಳನ್ನು, ಅಭಿಪ್ರಾಯಗಳನ್ನು, ನಡೆಯುತ್ತಿದ್ದ ಚರ್ಚೆಗಳನ್ನು ಮತ್ತು ಉದ್ರೇಕದ ವಾದಗಳನ್ನು ಕೇಳುವುದೇ ಒಂದು ವಿಶಿಷ್ಟ ಅನುಭವವಾಗಿತ್ತು. ದೇಶವನ್ನು ಬಾಧಿಸುತ್ತಿರುವ ಆಪತ್ತಿನ ಬಗ್ಗೆ ಮಾತನಾಡುವುದಕ್ಕಾಗಿ ವಿವಿಧ ವಿಚಾರಗಳು, ಶಿಕ್ಷಣ ತಜ್ಞರು, ಆತ್ಮಪರೀಕ್ಷೆ ಮಾಡಿಕೊಳ್ಳುವ ಕವಿಗಳು ಮತ್ತು ಸಾಮಾಜಿಕ ತಜ್ಞರು ಇತ್ಯಾದಿಯಾಗಿ ಎಲ್ಲ ಮನೋಭೂಮಿಕೆಯ ಜನರು ಒಟ್ಟುಗೂಡಿದಂತೆ ಆ ಸಮೂಹ ಇತ್ತು. ಅದೊಂದು ಬಗೆಯ ಆತ್ಮವಿಶ್ವಾಸ ತಂದುಕೊಡುವ ಸಭೆಯಾಗಿತ್ತು. ನಿನ್ನೆ ಮಿಥಿಲೇಶ್ ಶ್ರಿವಾತ್ಸವ ತಮ್ಮ ಕವನ ಓದಿದರು. ಹಿಮಕರ್, ಯೋಗೇಶ ಮತ್ತು ನೀರಜ್ ಕೂಡ ತಮ್ಮ ಬಾವಭರಿತ ಕವನಗಳನ್ನು ಓದಿದರು. ಅಭಿಷೇಕ ಶ್ರೀವಾತ್ಸವ ಅಕ್ರಮ್ ಮಾನವಹತ್ಯೆ ತಪ್ಪಿಸುವ ಉಪಾಯಗಳ ಬಗ್ಗೆ ಮಹತ್ವದ ಸಲಹೆಗಳನ್ನು ಕೊಟ್ಟರು ಅಮಲೇಶರಾಜು ಉಪವಾಸದ ಸ್ಥಳಕ್ಕೆ ಬಂದರು ಮತ್ತು ಉಪವಾಸದ ಧ್ಯೆಯೋದ್ದೇಶವನ್ನು ಸಮರ್ಥಿಸಿದರು ಅದೇ ರೀತಿ ಕವಿ ಮತ್ತು ಪತ್ರಿಕೋದ್ಯಮಿ ವಿಮಲ್‌ಕುಮಾರ ಕೂಡ.

ಹಿರಿಯ ಸಹದ್ಯೋಗಿಗಳಾದ ರಾಮಚಂದ್ರರಾಹಿ ಮತ್ತು ಅನಿಲ್‌ನೌರ್ಯ ಬಹಳ ಹೊತ್ತಿನವರೆಗೆ ದೇಶ ಮತ್ತು ಜಗತ್ತು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

ಕೊನೆಯ ದಿನವಾದ ಜುಲೈ ಒಂದರಂದು ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಿಸಿದ ಅನೇಕ ಜನರು ಉಪವಾಸದ ಸ್ಥಳಕ್ಕೆ ಬಂದರು. ಅಲ್ಲದೆ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಕೂಡ ಬಂದರು. ಅನೇಕ ಜನರು ಸ್ವ-ಪ್ರೇರಣೆಯಿಂದ ಬಂದಂಥವರಾಗಿದ್ದರು. ಅವರೆಲ್ಲ ಉಪವಾಸದ

ಉದ್ದೇಶಕ್ಕೆ ಬೆಂಬಲ ವ್ಯಕ್ತಪಡಿಸಿದರು. ಯುವಕರ ಹಾಜರಾತಿ ಪ್ರೋತ್ಸಾಹ ಕೊಡುವಂತಿತ್ತು. ಅವರು ಏಳನೇಯ ದಿನವು ಕೂಡ ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು. ದಿಲ್ಲಿಯ ಸುತ್ತಮುತ್ತಲಿನ ಅನೇಕ ಯುವಕರು ಪತ್ರಿಕೆಯಲ್ಲಿ ಸುದ್ಧಿ ಓದಿ ಬಂದವರಾಗಿದ್ದರು. ರೇಣುಗಂಭೀರ್, ಪ್ರೋ ಗೋಪೇಶ್ವರಸಿಂಗ್ ಮತ್ತು ಮಂಜು ಮೋಹನ ಉಪವಾಸ ಮುರಿಯುವುದಕ್ಕಾಗಿ ಹಣ್ಣಿನ ರಸಕೊಟ್ಟರು ಮತ್ತು ಅವರು ಈ ಉಪವಾಸದ ಉದ್ದೇಶವನ್ನು ಸಮಾಜ ಕೈಗೆತ್ತಿಕೊಳ್ಳುವುದನ್ನು ಮತ್ತು ಯಾವುದೇ ಹಂತದಲ್ಲಿ ದೊಂಬಿರಾಜ್ಯ ನಡೆಯದಂತೆ ನೋಡಿಕೊಳ್ಳುವುದೆಂದೂ ಹಾರೈಸಿದರು.

ಲೋಹಿಯಾ ಉಪವಾಸದ ಪರವಾಗಿ ಇರಲಿಲ್ಲ. ಅವರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗಿಯಾಗಿದ್ದರಿಂದ ಅವರಿಗೆ ಒಳ್ಳೆಯ ಅನುಭವವಿತ್ತು. ಅವರಿಗೆ ಜೈಲು ಹೋಗುವ ಧೈರ್ಯವಿತ್ತು. ಆದರೆ ನಮ್ಮಲ್ಲಿಯ ಅನೇಕರಿಗೆ ಆ ಧೈರ್ಯವಿಲ್ಲ. ಆದರೆ ನಮಗೆ ಬೇರೆ ಯಾವುದೇ ಪರ್ಯಾಯ ಇರುವಂತೆ ಕಾಣುತ್ತಿಲ್ಲ. ದೊಂಬಿಯ ದಾಳಿಯಿಂದ ಉಳಿದುಕೊಂಡರೆ ಕೆಲ ಕಾಲ ಜೈಲಿನಲ್ಲಿ ಇರಬೇಕಾಗುವುದು. ದೊಂಬಿರಾಜ್ಯ ಮುಂದುವರೆದರೆ ರಾಜಕೀಯ ಕಾರ್ಯಕರ್ತರು ಕೂಡ ದೊಂಬಿಯ ಕೋಪಕ್ಕೆ ಗುರಿಯಾಗುವರು. ಈಗಾಗಲೇ ಕೆಲವು ಲೇಖಕರು, ಬುದ್ಧಿಜೀವಿಗಳು ಗುರಿಯಾಗಿದ್ದಾರೆ. ಈಗಿನ ಸರ್ಕಾರ ಯಾವ ದೊಂಬಿಗೋರರ ವಿರುದ್ಧವು ಕ್ರಮ ಕೈಗೊಳ್ಳದೇ ಮೂಕ ಪ್ರೇಕ್ಷಕನಾಗಿ ಉಳಿದುಕೊಂಡು ಬಿಡಬಹುದು. ಇಂದಿನ ಸರ್ಕಾರ ದೇಶದ ಸಂಪನ್ಮೂಲಗಳನ್ನು ದೇಶ–ವಿದೇಶದ ಕಾರ್ಪೋರೇಟ್ ಉದ್ಯಮಿಗಳಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಹಸ್ತಾಂತರಿಸಲು ಹಗಲೂರಾತ್ರಿ ಕೆಲಸ ಮಾಡುತ್ತಿದೆ. ಯು.ಪಿ.ಎ ಸರ್ಕಾರ ಅಧಿಕಾರಕ್ಕೆ ಬರುತ್ತಲೇ ರಕ್ಷಣಾ ವಲಯದಲ್ಲಿ ನೂರಕ್ಕೆ ನೂರರಷ್ಟು ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಟ್ಟಿತು. ಯು.ಪಿ.ಎ ಸರ್ಕಾರದ ಆಳ್ವಿಕೆಯ ಕಾಲದಲ್ಲಿ ೧೯೫೪ ಳ ಭೂಸ್ವಾದೀನ ಕಾನೂನನ್ನು ಭೂಮಾಲೀಕರ ಹಿತಕ್ಕಾಗಿ ಕೊಂಚ ತಿದ್ದುಪಡಿ ಮಾಡಿತ್ತು. ಆದರೆ ಇಂದಿನ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಆ ಕಾನೂನಿಗೆ ಸಂಬಂಧಿಸಿದಂತೆ ಒಂದು ಸುಗ್ರೀವಾಜ್ಞೆ ಹೊರಡಿಸಿತು. ಅದು ಸಾರ್ವಜನಿಕ ವಲಯದಲ್ಲಿರುವ ನವರತ್ನ ಕೈಗಾರಿಕಾ ಘಟಕಗಳಿಗೆ ಸಂಬಂಧಿಸುದಾಗಿತ್ತು. ರೈಲ್ವೆ ಸ್ಟೇಷನಗಳನ್ನು ಮಾರುವಂತಾದಾಗಿತ್ತು ಮತ್ತು ರಾಷ್ಟ್ರ ವಿರೋಧಿ ಕಾರ್ಯದ ಕಡೆಯಿಂದ ಜನರ ಗಮನವನ್ನು ಬೇರೆಡೆ ಸೆಳೆಯುವುದಾಗಿತ್ತು.

ಉಪವಾಸದಿಂದಾದ ಅನುಭವ ದೊಂಬಿರಾಜ್ಯದ ವಿರುದ್ಧ ಇನ್ನು ಹೆಚ್ಚು ಕೆಲಸ ಮಾಡಲು ಪ್ರೇರಣೆಕೊಟ್ಟಿದೆ. ಈ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡುವುದಾಗಿ ಅನೇಕ ಸಹದ್ಯೋಗಿಗಳು ಪ್ರತಿಜ್ಞೆ ಕೈಗೊಂಡಿದ್ದಾರೆ. ಭಾರತದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳಿವೆ ಎಂದು ಅಲ್ಪಸಂಖ್ಯಾತರಿಗೂ ಮತ್ತು ಯುವಕರಿಗೂ ತಿಳಿಸಬೇಕಿದೆ. ಅವರು ಹೆದರಿಕೆಗೆ ಸೋಲಬಾರದು ಹಾಗೂ ಅವರನ್ನು ತಪ್ಪುದಾರಿಗೆಳೆಯಬಾರದು.

– ಸಾಭಾರ: ಜನತಾ

– ಅ.ನು.ಸು.ಕೌ

ದೇಶಗಳ ಒಕ್ಕೂಟ

–ವಿನೋಬಾ

[ಭಾರತ, ಪಾಕಿಸ್ತಾನ, ಅಫ್‌ಘಾನಿಸ್ತಾನ, ಬರ್ಮಾ ಮತ್ತು ಚೀನಾ ದೇಶಗಳ ಒಕ್ಕೂಟವಾದಲ್ಲಿ ದೇಶಗಳಲ್ಲಿಯ ಗಡಿ ಸಮಸ್ಯೆ ಬಗೆಹರಿದು ಶಾಂತಿ ನೆಲೆಸುವುದು ಎಂಬುದು ಆಚಾರ್ಯ ವಿನೋಬಾ ಅವರ ವಿಚಾರ ಇಂದು ತುಂಬ ಅಗತ್ಯವಾಗಿದೆ.]

ಸಂ.

ಇಂಗ್ಲೀಷ್ ದಿನಪತ್ರಿಕೆಯಾದ ಸ್ಟೇಟ್ಸ್‌ಮನ್ ಸಂಪಾದಕರ ಪ್ರಶ್ನೆಗೆ ಕೊಟ್ಟ ಉತ್ತರ ಈ ರೀತಿ ಇದೆ.

ಪ್ರಶ್ನೆ: ಎ.ಬಿ.ಸಿ ತ್ರಿಕೋನ ಎಂಬ ವಿಚಾರವನ್ನು ತಿಳಿದುಕೊಳ್ಳಬಯಸುತ್ತೇನೆ.

ಉತ್ತರ: ನೀವು ಏಷ್ಯಾದ ನಕಾಶೆ ನೋಡಿದರೆ ನಿಮ್ಮ ಗಮನಕ್ಕೆ ಒಂದು ವಿಷಯ ಬರುವುದು. ನಮ್ಮ ಯಾವೆಲ್ಲಾ ಸಮಸ್ಯೆಗಳಿವೆಯೋ ಅವುಗಳಲ್ಲಿ ಹಿಂದೂಸ್ತಾನ ಮತ್ತು ಪಾಕಿಸ್ತಾನದ ಸಮಸ್ಯೆಗಳಲ್ಲದೆ ಅಫ್‌ಘಾನಿಸ್ತಾನ ಮತ್ತು ಟಿಬೆಟ್, ನೇಪಾಳ, ಭೂತಾನ್, ಸಿಕ್ಕಿಂ, ಬರ್ಮಾ, ಸಿಲೋನ್ ಮುಂತಾದ ದೇಶಗಳ ಸಂಬಂಧ ಕೂಡ ಬರುತ್ತದೆ. ಕಾಶ್ಮೀರದ ಪಕ್ಕದಲ್ಲಿ ಒಂದು ಕಡೆ ಅಫ್‌ಘಾನಿಸ್ತಾನ ಮತ್ತು ಇನ್ನೊಂದು ಕಡೆ ಟಿಬೆಟ್ ಇದೆ. ಟಿಬೆಟ್‌ನ್ನು ನಾವು ಚೀನಾಕ್ಕೆ ಕೊಟ್ಟು ಬಿಟ್ಟೆವು. ಇದು ನನ್ನ ದೃಷ್ಟಿಯಲ್ಲಿ ತಪ್ಪು. ಟಿಬೆಟಿನ ಸ್ವಾತಂತ್ರ್ಯಕ್ಕಾಗಿ ನಾವು ಆಗ್ರಹಿಸಬೇಕಾಗಿತ್ತು. ಆಧ್ಯಾತ್ಮಿಕ ವಿಚಾರದೊಂದಿಗೆ ಟಿಬೆಟ್ ಸಂಬಂಧಿತವಾಗಿದೆ. ಅದೇ ರೀತಿ ಬರ್ಮಾ ದೇಶ. ಈಗ ಯಾವುದನ್ನು ಬರ್ಮಾ ಎಂದು ಕರೆಯುತ್ತೇವೊ ಅದರ ಹೆಸರೇ ತಿಳಿಸುವಂತೆ ಹಿಂದೂಸ್ತಾನದೊಂದಿಗೆ ಪ್ರಾಚೀನ ಕಾಲದಿಂದಲೂ ಅದರೊಂದಿಗೆ ಸಂಬಂಧ ಇದೆ. ಅದೇ ರೀತಿ ಸಿಲೋನ್ ಜೊತೆ ಕೂಡ ಅದು ಬೌದ್ಧ ವಿಚಾರದ ದೊಡ್ಡ ಸ್ಥಳವಾಗಿದೆ ಮತ್ತು ಹಿಂದ್ ಸಾಗರದಿಂದ ಅದು ಹಿಂದೂಸ್ತಾನದ ಜೊತೆಗೆ ಸೇರಿಕೊಂಡಿದೆ. ಆದ್ದರಿಂದ ಈ ಎಲ್ಲ ದೇಶಗಳ ಒಕ್ಕೂಟ ಏಷ್ಯಾ ಖಂಡಕ್ಕೆ ಲಾಭದಾಯಿಯಾಗುವುದು. ಎಲ್ಲಿಯವರೆಗೆ ಈ ಒಕ್ಕೂಟವಾದಲ್ಲಿ ಆಗುವುದಿಲ್ಲವೋ, ಅಲ್ಲಿಯವರೆಗೆ ಶಾಂತಿಯ ಆಶೆ ಇಲ್ಲವೆಂದು ನಾನು ಭಾವಿಸುತ್ತೇನೆ.

ಅಫ್‌ಘಾನಿಸ್ತಾನದೊಂದಿಗೆ ಇರುವ ಹಿಂದೂಸ್ತಾನದ ಸಂಬಂಧ ಬಹಳ ಪ್ರಾಚೀನ ಕಾಲದ್ದು. ಆಗಿನಿಂದಲೇ ಆ ಸಂಬಂಧವಿದೆ. ಮಹಾಭಾರತದ ಗಾಂಧಾರಿ ಗಾಂಧಾರ ದೇಶದವಳು. ಅಂದರೆ ಅಫ್‌ಘಾನಿಸ್ತಾನದವಳು. ನಮ್ಮ

ಮಹಾನ್ ಸಂಸ್ಕೃತ ವ್ಯಾಕರಣಕಾರ ಪಾಣೀನಿ ಕೂಡ ಅಲ್ಲಿಯವರಾಗಿದ್ದರು. ಸಿಂಧ್, ಬಲುಚಿಸ್ತಾನ, ಪೇಶಾವರ ಇತ್ಯಾದಿ ದೇಶಗಳು ಸಾಂಸ್ಕೃತಿಕ ದೃಷ್ಟಿಯಿಂದ ಹಿಂದೂಸ್ತಾನದ ಜೊತೆ ಸೇರಿವೆ. ನೀವು ಯಾವುದನ್ನು 'ತಕ್ಷಾಸಿಲಾ' ಎಂದು ಕರಿಯುತ್ತೀರೊ ಅದು ತಕ್ಷಶಿಲಾ ಆಗಿದೆ. ಈ ಎಲ್ಲ ಸಂಬಂಧಗಳು ಇಂದಿಗೂ ನಮ್ಮ ಜನರ ಮನದಲ್ಲಿ ಹಸಿರಾಗಿವೆ. ಇಂದು ಹಿಂದೂಸ್ತಾನ ಮತ್ತು ಚೀನಾ ಒಂದರ ವಿರುದ್ಧ ಇನ್ನೊಂದು ನಿಂತಿರುವಂತೆ ಕಂಡರೂ ಕೂಡ ಆ ಎರಡು ದೇಶಗಳು ಬಹಳ ಪ್ರಾಚೀನ ಕಾಲದಿಂದ ಪರಸ್ಪರ ಸಂಬಂಧ ಇಟ್ಟುಕೊಂಡಿರುವ ದೇಶವಾಗಿವೆ. ಆದ್ದರಿಂದ ಅವುಗಳ ಮಧ್ಯೆ ಒಳ್ಳೆಯ ಸಂಬಂಧವನ್ನು ಉಂಟುಮಾಡಬೇಕಿದೆ. ಈ ಎಲ್ಲ ಕೆಲಸ ಹೇಗೆ ಆಗುವುದು ಎಂಬ ಪ್ರಶ್ನೆ ಸಹಜವಾಗಿ ನಿಮ್ಮ ಮನಸ್ಸಿನಲ್ಲಿ ಹುಟ್ಟುವುದು. ನಮ್ಮೆಲ್ಲರ ತಿಳುವಳಿಕೆ ಸ್ವಚ್ಛವಾದರೆ ಮತ್ತು ಇದರ ಅಗತ್ಯ ಇದೇ ಎಂದು ಅನಿಸಿದಲ್ಲಿ ಇದು ಖಂಡಿತವಾಗಿ ಆಗಿಯೇ ತೀರುವುದು. ಇಂದು ನ್ಯೂಕ್ಲಿಯರ್‌ಎಜ್ ಮಾನವ ಸಮಾಜ ಹತ್ತಿರ ಬರುತ್ತಿದೆ. ಬೇರೆಯವರೊಂದಿಗೆ ಸಂಬಂಧ ಬಂದೆ ಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಈ ಒಕ್ಕೂಟದ ವಿಚಾರವನ್ನು ಮಂಡಿಸಿದ್ದೇವೆ. ಚೀನಾಕ್ಕೆ ಯುನೋದಲ್ಲಿ ಸ್ಥಾನ ಸಿಗಬೇಕೆಂದು ಭಾರತ ಒತ್ತಾಯಿಸಿದ ಮೇಲೂ ಚೀನಾದ ವಿರೋಧದ ಹೊರ್ತಾಗಿಯೂ ಭಾರತ ಸತತವಾಗಿ ಈ ಅಭಿಪ್ರಾಯವನ್ನು ಮಂಡಿಸಿದೆ.

ಪ್ರಶ್ನೆ: ಯಾವ ರೀತಿ ಒಕ್ಕೂಟವಾಗುವುದು?

ಉತ್ತರ: ಈ ವಿಷಯವನ್ನು ಯೋಚನೆ ಮಾಡಬೇಕು. ಎಲ್ಲರೂ ಕುಳಿತುಕೊಂಡು ಆಲೋಚಿಸಿದರೆ ಅದರ ವಿವರಗಳನ್ನು ಕೂಡ ಆಲೋಚಿಸಬಹುದು.

ಹದಿನೈದು ವರ್ಷಗಳಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. [ಐಜಣ ಂ.ಃ.ಅ. ಛಜ ಚಿ ಣಡುಚಿಟಿರಿಟಜ] ಎ ಅಂದರೆ ಅಫ್‌ಘಾನಿಸ್ತಾನ, ಬಿ ಅಂದರೆ ಬರ್ಮಾ ಮತ್ತು ಸಿ ಅಂದರೆ ಸಿಲೋನ್. ಭಾರತ ಮಧ್ಯದಲ್ಲಿ ಬರುವುದು. ಈ ಕ್ಷೇತ್ರದಲ್ಲಿ ಐಕ್ಯತೆ ಉಂಟಾದರೆ ಅವುಗಳದು ಮಹಾ ಒಕ್ಕೂಟವಾಗುವುದು. ಆಗ ಕೆಲಸವಾಗುವುದು.

ಇಂದಿಗೆ ಇಷ್ಟೇ ಸಾಕು.

ಸಾಭಾರ–ಜನತಾ
ಅನು. ಸು.ಕೌ

ಕಣ್ಮರೆಯಾಗುತ್ತಿರುವ ಮಂಗಳೂರಿನ ಹೆಗ್ಗುರುತುಗಳು

– ಶಕೀರ್ ಜಬೀನ್

ಮಂಗಳೂರಿನೊಂದಿಗೆ ನನ್ನ ದೈವಿ ಸಂಬಂಧ ಶುರುವಾದದ್ದು ಸುಳ್ಯದಲ್ಲಿ ಪಾಠ ಹೇಳಲು ಪ್ರಾರಂಭಿಸಿದಾಗ. ಕಛೇರಿಯ ಕೆಲಸಕ್ಕಾಗಿ ಮಂಗಳೂರಿಗೆ ಹೋಗಬೇಕಾದ ಸಂದರ್ಭಗಳು ಬರುತ್ತಿದ್ದವು. ನನ್ನ ಯಜಮಾನರಾದ ಝಾಕೀರ್‌ರವರು ಫಾಧರ್ ಮಲ್ಲರ್ ಸಂಸ್ಥೆಯಲ್ಲಿ ವೈದ್ಯಕೀಯ ಪ್ರಶಿಕ್ಷಣಕ್ಕಾಗಿ ಮಂಗಳೂರಿಗೆ ಹೋದುದರಿಂದ ನನಗೆ ಮಂಗಳೂರಿನಲ್ಲಿ ಇರುವ ಅವಕಾಶ ದೊರೆಯಿತು. ಪಾರ್ಲ್‌ನೀರ್ ರಸ್ತೆಯಲ್ಲಿ ನಮ್ಮದೇ ಆದ ಒಂದು ಮನೆಯಿತ್ತು. ಚಿಕ್ಕದಾಗಿದ್ದ ಊರು ಈಗ ದೊಡ್ಡ ಬದಲಾವಣೆಗಳಿಗೆ ತೆರೆದುಕೊಳ್ಳುತ್ತಿದ್ದ ಆ ಮಂಗಳೂರಿನಲ್ಲಿ ಓಡಾಡುವುದೆಂದರೆ ನಮ್ಮಿಬ್ಬರಿಗೂ ಒಂದು ಖುಷಿ. ನಾವು ನೋಡುತ್ತಿದ್ದಂತೆಯೇ ದೊಡ್ಡ ಬಂಗಲೆಗಳ ಸ್ಥಳದಲ್ಲಿ ಅಪಾರ್ಟ್‌ಮೆಂಟ್ ಬರುತ್ತಿದ್ದವು. ಝಾಕೀರ್ ಅವರ ಪ್ರಶಿಕ್ಷಣ ಮುಗಿದಾದ ಮೇಲೆ ಪ್ರತಿವರ್ಷವೂ ಮಂಗಳೂರಿಗೆ ಹೋಗುವ ಪರಿಪಾಠ ಬೆಳೆಸಿಕೊಂಡೆವು. ನನ್ನ ಮೌಲ್ಯಮಾಪನದ ಕೆಲಸ, ಸ್ನೇಹಿತರ ಭೇಟಿ, ಮದುವೆ ಮುಂತಾದ ಸಂಗತಿಗಳು ಮಂಗಳೂರಿಗೆ ಹೋಗಲು ಮತ್ತು ಆ ಊರಿನ ಕ್ಷಾರಯುಕ್ತ ಗಾಳಿಯನ್ನು ಅನುಭವಿಸಲು ನೆಪಗಳಾಗುತ್ತಿದ್ದವು. ಮಂಗಳೂರಿನಲ್ಲಿ ಅನೇಕ ಬಗೆ ವಿಸ್ಮಯಗಳಿದ್ದವು. ಅವುಗಳಲ್ಲಿ ವಿಶೇಷವಾದುದೆಂದರೆ ಎಲ್ಲೆಡೆ ಹಬ್ಬಿ ಮೂಗಿಗೆ ಅಡುರುವ ಮೀನಿನ ವಾಸನೆ!

ಕಳೆದ ನಾಲ್ಕು ವರ್ಷಗಳಿಂದ ಮಂಗಳೂರಿಗೆ ಹೋಗಲು ನನಗೆ ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಅಲ್ಲಿಗೆ ಹೋಗುವ ಸಂದರ್ಭ ಬಂದಿತು. ಅಲ್ಲಿ ನನಗೆ ಆಘಾತ ಕಾದಿತ್ತು. ನನ್ನ ಮಟ್ಟಿಗೆ ಮಂಗಳೂರು ತುಂಬಾ ಬದಲಾಗಿತ್ತು. ನಾಲ್ಕು ಪ್ರಸಿದ್ಧ ಹೆಗ್ಗುರುತುಗಳು ಮಾಯಾವಾಗಿದ್ದವು. ಅವುಗಳ ಮಾಯಾವಾಗುವಿಕೆ ಮಂಗಳೂರಿನಲ್ಲಿ ಆಗುತ್ತಿರುವ ಬದಲಾವಣೆಯನ್ನು ಸಂಕೇತವೆನ್ನಬಹುದಾಗಿದೆ. ಅತ್ರಿ ಪುಸ್ತಕಾಲಯ, ಪಂಪ್‌ಭಾವಿವೃತ್ತದ ಕಳಶ, ಲೇಡಿಹಿಲ್‌ನ ತೋಟದಿಂದ ಕಾಣುವ ನೋಟ ಮತ್ತು ಪಂಪಭಾವಿ ವೃತ್ತ. ಅತ್ರಿ ಪುಸ್ತಕಾಲಯ ಕೇವಲ ಪುಸ್ತಕದ ಅಂಗಡಿಯಾಗಿರಲಿಲ್ಲ. ಅದು ಒಂದು ಊರಿನ ಜನರ ಓದುವ ಅಭ್ಯಾಸ ಕ್ರಮದ ದರ್ಪಣವಾಗಿತ್ತು. ಬೇಸಿಗೆ ಬತ್ತೆಂದರೆ ಮಕ್ಕಳ ಸಮೂಹವೇ ಅಲ್ಲಿ ಇರುತ್ತಿತ್ತು. ಪುಸ್ತಕಾಲಯದಲ್ಲಿ ಸಂಗ್ರಹಿಸಿಟ್ಟಿದ್ದ ಟಿಂಕಲ್, ಟಿನ್‌ಟಿನ್, ಚಂದಮಾಮ, ಅಮರಚಿತ್ರಕಥಾ, ಬ್ಯಾಟ್‌ಮನ್ ಮತ್ತು ಸ್ಪೈಡರ್‌ಮನ್ ಇತ್ಯಾದಿ ಪುಸ್ತಕಗಳನ್ನು ಮಕ್ಕಳು ಖರೀದಿ ಮಾಡುತ್ತಿದ್ದರು. ಅಂಥ ಪುಸ್ತಕಗಳಲ್ಲಿಯ ಕೆಲವೊಂದನ್ನು ಎತ್ತಿಕೊಳ್ಳದೇಯಿರಲು ನನಗೂ ಸಾಧ್ಯವಾಗುತ್ತಿರಲಿಲ್ಲ. ನನಗೂ ಅಷ್ಟು ಆಸೆಯಾಗುತ್ತಿತ್ತು. ಪ್ರವಾಸ ಕಥನಗಳು, ಪಾಕ್‌ಶಾಸ್ತ್ರದ ಪುಸ್ತಕಗಳು, ಸಾಹಿತ್ಯ ವಿಮರ್ಶೆ ಮುಂತಾದ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳು ತಮ್ಮ ಸ್ಥಳಗಳಿಗಾಗಿ ಅಲ್ಲಿ ಸ್ಪರ್ಧೆ ನಡೆಸುತ್ತಿದ್ದವು! ಪುಸ್ತಕಾಲಯದ ಮಾಲೀಕರಾದ

ಶ್ರೀ ಅಶೋಕವರ್ಧನರವರಿಗೆ ಅಂಗಡಿಗೆ ಬರುವ ಪ್ರತಿಯೊರ್ವ ವ್ಯಕ್ತಿಯ ಪರಿಚಯವಿತ್ತು. ಅವರು ಕೇವಲ ಪುಸ್ತಕಗಳನ್ನು ಮಾರುತ್ತಿರಲಿಲ್ಲ. ಅವರೇ ಸ್ವತಃ ಅವುಗಳಲ್ಲಿ ಹೆಚ್ಚಿನವುಗಳನ್ನು ಓದಿರುತ್ತಿದ್ದರು. ಪುಸ್ತಕ ಮಾರಾಟವಾದ ಮೇಲೆ ಆ ಪುಸ್ತಕದ ಬಗ್ಗೆ ಮಾತುಕಥೆಗಳು ನಡೆಯುತ್ತಿದ್ದವು. ಗ್ರಾಹಕ ಮತ್ತು ಪುಸ್ತಕದ ಅಂಗಡಿ ಮಾಲೀಕ ಶ್ರೀ ಅಶೋಕವರ್ಧನ ಮಧ್ಯೆ ಪುಸ್ತಕ ಖರೀದಿ ಸಮಯವಾಗಲೀ, ಮಾರುವ ಸಮಯವಾಗಲೀ, ಅದೊಂದು ಪುಸ್ತಕದ ಮತ್ತು ಲೇಖಕರ ಬಗ್ಗೆ ಗಂಭೀರ ಚರ್ಚೆಯ ಪ್ರಾರಂಭದ ಸಮಯವಾಗಿರುತ್ತಿತ್ತು. ಅಷ್ಟೇ ಅಲ್ಲ, ಸಾಂಸ್ಕೃತಿಕ ಚಟುವಟಿಕೆಗಳ ಚರ್ಚೆಯ ಸಮಯ ಕೂಡ. ಇಂಥ ಬಗೆಯ ಚರ್ಚೆ ನಡೆಯುವಾಗ ಇನ್ನು ಕೆಲವು ಜನರು ಸುತ್ತುವರಿದು ಆ ಸಂಭಾಷಣೆಯನ್ನು ಕುತುಹಲದಿಂದ ಕೇಳುತ್ತಿದ್ದರು.

ಅನೇಕ ಬಾರಿ ನನಗೆ ಪುಸ್ತಕದ ಅಂಗಡಿಯಲ್ಲಿಯೆ ಪುಸ್ತಕ ಓದಲು ಅಶೋಕರವರು ಅನುಮತಿ ಕೊಡುತ್ತಿದ್ದರು. ಆಗ ನಾನು ಅಂಗಡಿಯ ಮೆಟ್ಟಿಲು ಮೇಲೆ ಕುಳಿತು ಒಂದೇಸಲಕ್ಕೆ ಪುಸ್ತಕ ಓದಿ ಮುಗಿಸುತ್ತಿದ್ದೆ ಅಥವಾ ಒಂದೆರಡು ಸಲದ ಭೇಟಿಯ ಸಮಯದಲ್ಲಿ ಓದಿ ಮುಗಿಸುತ್ತಿದ್ದೆ. ಅತ್ರಿಯವರ ವ್ಯಕ್ತಿತ್ವ ನಮ್ಮನ್ನು ಮಂಗಳೂರಿನೊಂದಿಗೆ ಕಟ್ಟಿಹಾಕಲು ಕಾರಣವಾಗಿತ್ತು. ಅಶೋಕ ವರ್ಧನ ಮತ್ತು ಪುಸ್ತಕದ ಅಂಗಡಿಗೆ ಭೇಟಿ ಕೊಟ್ಟವರ ಮಧ್ಯೆ ಚರ್ಚೆ ನಡೆಯುತ್ತಿರುವಾಗ ನಾನು ಅಂಗಡಿಯ ರ್‍ಯಾಕ್‌ಗಳಲ್ಲಿ ಸಂಗ್ರಹಿತವಾಗಿದ್ದ ಸಾಲು-ಸಾಲು ಪುಸ್ತಕಗಳಲ್ಲಿಯ ಒಂದೊಂದೇ ಪುಸ್ತಕವನ್ನು ಪಕ್ಕಕ್ಕೆ ಸರಿಸಿ ನೋಡುವುದೇ ಒಂದು ವಿಶೇಷ ಅನುಭವ. ಈಗ ನಾನು ಆ ಅನುಭವವನ್ನು ಬಹುವಾಗಿ ಕಳೆದುಕೊಂಡಿದ್ದೇನೆ. ಅತ್ರಿಯವರು ಇಲ್ಲದ ಆ ಬಲಮಟ್ಟ ಮುಂಚಿನಂತಾಗುವುದು ಸಾಧ್ಯವಿಲ್ಲ.

ಅತ್ರಿಯವರ ಮೇಲ್ವಿಚಾರಣೆಯ ಪುಸ್ತಕದ ಅಂಗಡಿ ಕಣ್ಮರೆಯಿಂದಾದ ನಷ್ಟ ಮಂಗಳೂರನ್ನು ಆವರಿಸಿಕೊಳ್ಳುತ್ತಿರುವ ಬದಲಾವಣೆಯ ರೂಪಕವೆಂದು ಅರ್ಥೈಸಬಹುದು. ಈಗ ಅಂಗಡಿಯಲ್ಲಿಯ ಓದುವಿಕೆ ಮೊದಲಿನ ಹಾಗೆ ವಿರಾಮದ ರೀತಿಯಲ್ಲಿಲ್ಲ. ಈಗ ಮಕ್ಕಳಿಗೆ ಬೇರೆ ವಿಧವಾದ ಕಲಿಕೆಯ ಮತ್ತು ಮನೋರಂಜನೆಯ ಸಾಧನಗಳಿವೆ. ಇತ್ತೀಚೆಗೆ ಮಾಲ್‌ಗಳು ಜನರ ಖಯಾಲಿಗಳಾಗಿವೆ. ಮಾಲ್‌ಗಳಲ್ಲಿರುವ ಪುಸ್ತಕದ ಮಳಿಗೆಗಳಲ್ಲಿಯ ಪುಸ್ತಕಗಳ ಸ್ಥಾನ ದಿನೇದಿನೇ ಕಡಿಮೆಯಾಗುತ್ತಿದೆ. ಕಾಫಿಮಗ್, ಬ್ಯಾಗ್, ಫರ್ಸ್, ಕ್ಯಾಲೆಂಡರ್‍ಸ್, ಗ್ರೀಟಿಂಗ್‌ಕಾರ್ಡ್ ಮುಂತಾದವು ಪುಸ್ತಕಗಳಿಗೆ ಮೀಸಲಾಗಿದ್ದ ಸ್ಥಳವನ್ನು ಆಕ್ರಮಿಸುತ್ತಿವೆ.

ಕಣ್ಮರೆಯಾಗಿರುವ ಎರಡನೇ ಹೆಗ್ಗುರುತು ಪಂಪ್‌ಭಾವಿ ವೃತ್ತದಲ್ಲಿ ಇದ್ದ ಕಳಶ. ಆ ವೃತ್ತದ ವಿಶೇಷತೆಯಿಂದಾಗಿಯೇ ಮಂಗಳೂರಿಗೆ ವಿಶಿಷ್ಟತೆ ಬಂದಿತ್ತು. ಕಳಶದ ಸುತ್ತಲೂ ಹುಲ್ಲುಹಾಸಿನೊಂದಿಗೆ ಇರುವ ದೊಡ್ಡ ವೃತ್ತವು ಮಂಗಳೂರು ಪ್ರವೇಶ ದ್ವಾರದಲ್ಲಿ ಒಂದು ಗಂಭೀರ ಪರಿಸರವನ್ನು ಉಂಟುಮಾಡಿತ್ತು. ಜನಸಂದಣಿ ಮತ್ತು ವಾಹನಗಳ ಓಡಾಟ ಹೆಚ್ಚಾದುದರಿಂದ ಮೇಲುಸೇತುವೆಯ ಅಗತ್ಯ ಉಂಟಾಗಿ ಆ ಕಳಶವನ್ನು ಒಂದು ಮೂಲೆಯಲ್ಲಿ ಇಡಲಾಗಿದೆ. ಅದಕ್ಕೊಂದು ಸೂಕ್ತ ಸ್ಥಳ ಸಿಗುವವರೆಗೆ ಆ ಕಳಶ ಮೂಲೆಯಲ್ಲೇ ಇರಬಹುದೆಂದು ಆಟೋರಿಕ್ಷಾ ಡ್ರೈವರ್ ಹೇಳಿದ. ಆಗಸದೆತ್ತರಕ್ಕೆ

ಮಂಗಳೂರಿನಲ್ಲಿ ಬರುತ್ತಿರುವ ಗಗನ ಚುಂಬಿಗಳಿಂದಾಗಿ ಆ ಕಳಶ ತನ್ನೆಲ್ಲಾ ಮೆರಗನ್ನು ಕಳೆದುಕೊಂಡು ಅಪ್ರಸ್ತುತವಾಗಿ ಮೂಲೆಯೇ ಕುಳಿತುಕೊಂಡಿರಬೇಕಾಗಿದೆ. ಪಂಪ್‌ ಭಾವಿವೃತ್ತವು ಕೂಡ ಕಣ್ಮರೆಯಾಗಿದೆ. ವೃತ್ತದ ಎದಿರು ಭಾಗದಲ್ಲಿದ್ದ ಹೋಟೆಲ್ ಕಾಲೇಜಾಗಿ ಪರಿವರ್ತಿತವಾಗಿದೆ.

ಬಾವುಟೆ ಗುಡ್ಡೆ ಮೇಲಿನ ತೋಟದಿಂದ ಕಾಣುತ್ತಿದ್ದ ಆದರೆ ಈಗ ಕಣ್ಮರೆಯಾಗಿರುವ ಇತರ ಹೆಗ್ಗುರುತುಗಳ ಬಗ್ಗೆ ಮಂಗಳೂರಿನ ಕೆಲವೇ ಕೆಲವು ಜನ ಮಾತನಾಡುತ್ತಾರೆ. ಬಾವುಟೆ ಗುಡ್ಡೆಯಲ್ಲಿಯ ಲೇಡಿಹಿಲ್‌ನಿಂದ ಕಾಣುತ್ತಿದ್ದ ಸುಂದರವಾದ ದೃಶ್ಯವನ್ನು ಈಗ ಒಂದು ಅಪಾರ್ಟ್‌ಮೆಂಟ್ ಮರೆಮಾಡಿದೆ. ನನ್ನ ಹಿಂದಿನ ತಲೆಮಾರಿನವರು ಆ ಸ್ಥಳದಿಂದ ಸಮುದ್ರವನ್ನು ನೋಡುತ್ತಿದ್ದರು. ತೆಂಗಿನ ಮರಗಳ ಸಾಲಿನ ಆಚೆಗಿದ್ದ ಸಮುದ್ರದ ಇರುವಿಕೆಯನ್ನು ಅನುಭವಿಸಬಹುದಾಗಿತ್ತು. ಈಗಿನ ಸ್ಥಿತಿ ಹೇಗಾಗಿದೆ ಎಂದರೆ "ನೀವು ಸಮುದ್ರವನ್ನು ನೋಡಬೇಕೆಂದರೆ ಆ ಸ್ಥಳದಲ್ಲಿ ಒಂದು ಪ್ಲಾಟ್ ಖರೀದಿಸಿರಿ" ಎಂಬ ಸಂದೇಶವನ್ನು ಕೊಡುತ್ತಿರುವುದೆಂದು ಅನಿಸುತ್ತದೆ. ಸ್ಥಳೀಯ ಜನರು ಈ ವಿಷಯದ ಬಗ್ಗೆ ಮಾತನಾಡಲಾಗದಷ್ಟು ಸಮಯವಿಲ್ಲದೆ ತಮ್ಮ ದೈನಂದಿನ ಕೆಲಸದಲ್ಲಿ ಮುಳುಗಿ ಹೋಗಿದ್ದಾರೆ. ಸಾಮಾನ್ಯ ಮನುಷ್ಯನಿಗೂ ಕೂಡ ಸಮುದ್ರವನ್ನು ನೋಡುವ ಅಥವಾ ಅದರ ಇರುವಿಕೆಯನ್ನು ಅನುಭವಿಸಲು ಹಕ್ಕು ಇದೆ ಎಂದು ಒತ್ತಾಯಿಸಲು ಸಾಧ್ಯವಾಗುದಷ್ಟು ಮಂಗಳೂರಿನ ಜನಕ್ಕೆ ಆ ಸ್ಥಳದಲ್ಲಿ ಸಮಯ ಕಳೆಯಲು ಬಿಡುವಾಗಿದಿಯೇ ಎಂದು ಆಶ್ಚರ್ಯಪಡಬೇಕಾಗಿದೆ. ಈ ಬದಲಾವಣೆ ಯೊಂದಿಗೆ ಕಣ್ಮರೆಯಾಗುತ್ತಿರುವ ಹೆಗ್ಗುರುತುಗಳೊಂದಿಗೆ ಕಾಲು ದಾರಿಗಳನ್ನು ಸೇರಿಸಿರಿ. ನಗರದಲ್ಲಿ ಇರಬೇಕಾದರೆ ಈಗ ಕಾರು ಇರುವುದು ಮತ್ತು ಅದರೊಂದಿಗಿನ ಕರ್ಕಶ ಸದ್ದು ಅನಿವಾರ್ಯವಾಗಿದೆ.

ಇವೆಲ್ಲವೂ ಆಕಸ್ಮಿಕ ಘಟನೆಗಳೆನಲ್ಲಾ. ಸ್ಪಷ್ಟವಾಗಿ ಗೊತ್ತಾಗುವಷ್ಟು ಬದಲಾವಣೆ ಯಾಗುತ್ತಿದೆ. ಕಣ್ಮರೆಯಾಗುತ್ತಿರುವ ಹೆಗ್ಗುರುತಗಳ ಈ ಪ್ರಕ್ರಿಯೆ ಬಹಳ ಮುಂಚಿನಿಂದಲೇ ಆರಂಭವಾಗಿದೆ. ಮೊದಲಿದ್ದ ಭತ್ತದ ವ್ಯವಸಾಯವನ್ನು ವಾಣಿಜ್ಯ ಬೆಳೆಗಳಿಗಾಗಿ, ಹಂಚಿನ ಮನೆಗಳನ್ನು ಅಪಾರ್ಟ್‌ಮೆಂಟ್‌ಗಳಿಗಾಗಿ ಕೆಡವಿ ಹಾಕುವುದು ಮತ್ತು ಕಿರಾಣಿ ಅಂಗಡಿಗಳ ಸ್ಥಳದಲ್ಲಿ ಸೂಪರ್ ಮಾರ್ಕೆಟ್‌ಗಳನ್ನು ನಿರ್ಮಿಸುವುದು ಇತ್ಯಾದಿ ಬದಲಾವಣೆ ಆಗುತ್ತಲೇ ಬಂದಿದೆ. ಆದ್ದರಿಂದ ಮಾಲ್‌ಗಳಲ್ಲಿ ವರ್ಗಾಯಿಸಲ್ಪಟ್ಟಿರುವ ಪುಸ್ತಕದ ಅಂಗಡಿಗಳು ಮತ್ತು ಕಳಶದ ಸ್ಥಳಾಂತರ ಅಸಂಬದ್ಧವಾಗಿ ಕಾಣುತ್ತವೆ. ಈ ಎಲ್ಲ ಹೆಗ್ಗುರುತಗಳ ಕಣ್ಮರೆ ಬದಲಾಯಿಸಿಕೊಳ್ಳುತ್ತಿರುವ ಮಂಗಳೂರಿನ ಜನರ ಮನೋಭಾವದ ಸಂಕೇತಗಳೆ? ಭಾರತದಲ್ಲಿಯ ನಗರ ಪ್ರದೇಶಗಳ ಬದಲಾವಣೆಗಳು ಜೇನ್ ಬೌಡ್ರಿಲಾರ್ಡ್ಸ್‌ನ ಅಮೇರಿಕಾಕ್ಕೆ ಹೋಲುತ್ತಿದೆ. ಯಾವುದೇ ಊರಿನೊಂದಿಗೆ ಭಾವಾನಾತ್ಮಕ ಸಂಬಂಧ ಹೊಂದಿದ ವ್ಯಕ್ತಿಗೆ ಮಂಗಳೂರಿನಲ್ಲಿಯ ಈ ಬದಲಾವಣೆ ಯಾವುದೇ ಊರಿನ ಕಥೆಯಾಗಬಹುದೆ?

[ಲೇಖಕಿ ದಕ್ಷಿಣ-ಕನ್ನಡ ಸುಳ್ಯದಲ್ಲಿಯ ನೆಹರು ಸ್ಮಾರಕ ಕಾಲೇಜಿನಲ್ಲಿ ಇಂಗ್ಲೀಷ್ ವಿಭಾಗದ ಮುಖ್ಯಸ್ಥೆ]

(ಅನು. ಸು.ಕೌ)

ಸಬ್ ಕೊ ಸನ್ಮತಿ ದೇ ಭಗವಾನ್!

– ಲಲಿತ ಎಸ್.

ಇಳೆಯ ಮೇಲೆ ಈಗ ಶ್ರಾವಣ ಬಂದಿಳಿದಿದೆ. ಆದರೆ ಬರಬೇಕಾದ ಮಳೆ ಮಾತ್ರ ತನ್ನ ಮಾರ್ಗವನ್ನು ಹುಡುಕುತ್ತಿರಬಹುದು. ಆಷಾಢದ ಗಾಳಿಯೂ ಭೂಮಿಯನ್ನು ಮರೆತಂತಿತ್ತು. ಆಷಾಢದಲ್ಲಿ ಹೆಚ್ಚು ಪ್ರಮಾಣದ ಮಳೆ ಬೀಳುವ ಪ್ರದೇಶಗಳಲ್ಲಿ ಈ ಬಾರಿ ಹನಿಗಳುದುರಿ ಮಾಯವಾಗಿವೆ. ಮಳೆ ಬಾರದಂತಿದ್ದ ಮೈದಾನಪ್ರದೇಶಗಳಲ್ಲಿ ಮಳೆಯಾಗಿದೆ. ಪ್ರಕೃತಿಯ ಲೀಲೆ ಮತ್ತು ಚಿಂತನೆಗಳು ಏನಿರಬಹುದು? ಅದು ನಮ್ಮ ಊಹೆಗೆ ನಿಲುಕದ ವಿಷಯ. ಕಿರಿಯರಿಗೆ ಮಳೆಯನ್ನು ಕುರಿತು ಚಿಂತಿಸಲು ಸಮಯವಿಲ್ಲ. ಹಿರಿಯರಲ್ಲಿ ಕೆಲವರು ಕಾಲಾಯ ತಸ್ಮೈ ನಮಃ ಎಂದು ಎಲ್ಲವನ್ನೂ ಕಾಲಕ್ಕೆ ಅರ್ಪಿಸಿ ನಿಶ್ಚಿಂತರಾಗುತ್ತಾರೆ, ರೈತರೆಲ್ಲ ಆತ್ಮಹತ್ಯೆಗೆ ಶರಣಾಗಿದ್ದಾರೆ, ಮಕ್ಕಳಂತೂ ಹಿರಿಯರನ್ನು ಹೆತ್ತವರನ್ನು ಕಡೆಗಣಿಸುತ್ತಿದ್ದಾರೆ, ಏಕೋ ಕಾಲವೇ ಕೆಟ್ಟುಹೋಗಿದೆ ಎಂದು ಹೇಳುತ್ತ ಎಲ್ಲಕ್ಕೂ ಕಾಲವನ್ನೇ ಕಾರಣವನ್ನಾಗಿಸಿ ದೂರುತ್ತಿದ್ದಾರೆ. ಬದಲಾಗಿರುವುದು ಕಾಲವೋ, ಇಲ್ಲ ನಮ್ಮ ಮನಸ್ಸುಗಳೋ ಎನ್ನುವ ಸಂಶಯ ನನ್ನನ್ನು .ಕಾಡುತ್ತಿದೆ. ನಾಲ್ಕೈದು ದಶಕಗಳ ಹಿಂದೆ ನಮ್ಮ ಸಮಾಜದ ಜನರ ನಡವಳಿಕೆಗಳು ಹೇಗಿದ್ದವು ಎನ್ನುವುದನ್ನು ನೆನಪುಮಾಡಿಕೊಂಡರೆ ಆಶ್ಚರ್ಯಕರ ಸಂಗತಿಗಳು ಹೊರಬರುತ್ತವೆ. ಪ್ರಾಥಮಿಕಶಾಲೆಗೆ ಸೇರಿದ ತಮ್ಮ ಮಕ್ಕಳನ್ನು ಶಾಲೆಗೆ ಸುರಕ್ಷಿತವಾಗಿ ತಲುಪಿಸುವ ಮತ್ತು ಸಂಜೆ ಶಾಲೆಯಿಂದ ಮನೆಗೆ ಕರೆತರುವ ಜವಾಬ್ದಾರಿಯನ್ನು ಕೆಲವು ತಿಂಗಳುಗಳವರೆಗೆ ಪೋಷಕರೇ ವಹಿಸಿಕೊಳ್ಳುತ್ತಿದ್ದರು. ನಂತರ ಬಡಾವಣೆಯ ಇತರ ಮಕ್ಕಳೊಂದಿಗೆ ತಮ್ಮ ಮಕ್ಕಳೂ ಸೇರಿ ಎಲ್ಲರೂ ಒಟ್ಟಾಗಿ ಶಾಲೆಗೆ ಹೋಗುವ ಅಭ್ಯಾಸವನ್ನು ಕಲಿಸುತ್ತಿದ್ದರು. ಇದರಿಂದ ಪರಸ್ಪರ ಸೌಹಾರ್ದ ಮತ್ತು ಸಹಕಾರದ ಭಾವನೆಗಳನ್ನು ಬಾಲ್ಯದಿಂದಲೇ ಕಲಿಯುವಂತಹ ವಾತಾವರಣವಿರುತ್ತಿತ್ತು. ಕುಟುಂಬವೆಂದರೆ ಅಪ್ಪ, ಅಮ್ಮ, ಮಗ, ಸೊಸೆ, ಮೊಮ್ಮಕ್ಕಳು ಎನ್ನುವ ಅರ್ಥವಿರುತ್ತಿತ್ತು. ಇದಲ್ಲದೆ ತಮ್ಮನ ಮಕ್ಕಳು, ತಂಗಿಯ ಮಕ್ಕಳು, ಮಗಳ ಮಕ್ಕಳು–ಹೀಗೆ ಮನೆಯಲ್ಲಿದ್ದು ಶಾಲೆಗೆ ಹೋಗುವವರಲ್ಲದೆ ಆಗಾಗ ಬಂದು ಹೋಗುವ ಬಂಧುಬಳಗದವರಿಗೂ ಆತ್ಮೀಯ ಸ್ವಾಗತವಿರುತ್ತಿತ್ತು. ತಾಪತ್ರಯಗಳ ನಡುವೆಯೇ ಎಲ್ಲರನ್ನೂ ಸಂಭಾಳಿಸುವ ಶಕ್ತಿ ಮತ್ತು ಮನಸ್ಸು ಸ್ತ್ರೀಯರಿಗೆ ಸಹಜವೆನ್ನುವ ರೀತಿಯಿತ್ತು. ಜನಗಣತಿಗೆಂದು ಮನೆಗೆ ಬರುತ್ತಿದ್ದ ಅಪರಿಚಿತರಿಗೂ ಕೆಲವು ಕುಟುಂಬಗಳಲ್ಲಿ ಕುಡಿಯಲು ನೀರು ಅಥವಾ ಕಾಫ಼ಿಯ ಸತ್ಕಾರವಿರುತ್ತಿತ್ತು. ಹಣಕ್ಕೆ ಕೊರತೆಯಿದ್ದರೂ ಹೃದಯಶ್ರೀಮಂತಿಕೆಗೆ ಬರವಿರಲಿಲ್ಲ. ವೈಯಕ್ತಿಯ ವಿಷಯಗಳನ್ನು ಕುರಿತಾದ ಮಾತುಕತೆಯ ನಂತರ ಊರಿನ ಮಳೆ ಬೆಳೆಗಳನ್ನು ಕುರಿತಾದ ಮಾತುಗಳಿರುತ್ತಿದ್ದವು. ನಡುವೆ ಪರಿಚಿತರ ಕ್ಷೇಮಕುಶಲಗಳನ್ನು ಕುರಿತಾದ ವಿಷಯಗಳೂ ಇರುತ್ತಿದ್ದವು. ಮನೆಗೆ ಬಂದವರನ್ನು ಬೀಳ್ಕೊಡುವ ಸಮಯದಲ್ಲಿ ಬಸ್‌ನಿಲ್ದಾಣದವರೆಗೆ ಅಥವಾ

ರೈಲ್ವೇನಿಲ್ದಾಣದವರೆಗೆ ಮನೆಯ ಸದಸ್ಯರೊಬ್ಬರು ಜೊತೆಯಾಗುತ್ತಿದ್ದರು. ಇಬ್ಬರ ಮನಗಳನ್ನೂ ವಿದಾಯದ ನೋವು ಕೆಲವು ದಿನಗಳವರೆಗೆ ಕಾಡುತ್ತಿತ್ತು. ಕಷ್ಟದಲ್ಲಿದ್ದವರಿಗೆ ನೆರವಾಗುವ ಮತ್ತು ಉಪಕಾರ ಮಾಡಿದವರನ್ನು ಕೃತಜ್ಞತೆಯಿಂದ ಸ್ಮರಿಸುವ ಜನರ ಸಂಖ್ಯೆ ಹೆಚ್ಚೇ ಇತ್ತು. ಮೋಸ ಮಾಡುವವರಿದ್ದರೂ ಅವರು ದೇವರ ಮೇಲಿನ ಆಣೆ ಪ್ರಮಾಣಗಳಿಗೆ ಹೆದರುವವರಾಗಿದ್ದರು. ಕಾಲಕಾಲಕ್ಕೆ ಮಳೆಯಾಗಿ ಸಾಕಷ್ಟು ಬೆಳೆಯನ್ನು ಬೆಳೆದರೂ ಆರ್ಥಿಕಮಟ್ಟ ಮಾತ್ರ ಅಷ್ಟಕ್ಕಷ್ಟೇ ಎನ್ನುವಂತಿರುತ್ತಿತ್ತು. ಆದರೂ ಎಲ್ಲರ ಮನಗಳಲ್ಲಿ ಭಾವನಾತ್ಮಕ ಸೆಲೆಯೊಂದು ಪ್ರವಹಿಸುತ್ತಿತ್ತು. ಸಾಕಿದ ಪ್ರಾಣಿಗಳಿಗೂ ಹೆಸರಿಟ್ಟು ಮಕ್ಕಳಂತೆ ಪೋಷಿಸುವ ಮತ್ತು ಅವುಗಳ ಸಾವಿಗೆ ದುಃಖಿಸುವ ಜನರಿದ್ದರು. ಪತ್ರಗಳಲ್ಲಿ ಪ್ರೀತಿಯ ಮಹಾಪೂರವೇ ಹರಿಯುತ್ತಿತ್ತು. ಬಂದ ಪತ್ರಗಳನ್ನು ಮತ್ತೆ ಮತ್ತೆ ಓದಿ ಭಾವುಕರಾಗುವವರೂ ಇದ್ದರು ಎಂದರೆ ಈಗ ಯಾರೂ ನಂಬುವುದಿಲ್ಲವೇನೋ. ಇಂದು ನಮ್ಮಲ್ಲಿ ಅದೇಕೋ ಭಾವನೆಗಳೇ ನಶಿಸಿಹೋಗಿವೆ. ಗಾಂಧೀಜಿಯವರ ಆತ್ಮಕಥೆಯನ್ನು ಓದುತ್ತಿದ್ದಂತೆ ಅನೇಕ ವಿಷಯಗಳು ನಮ್ಮ ಅರಿವಿಗೆ ಬರುತ್ತವೆ. ಮಾಡಿದ ತಪ್ಪನ್ನು ಒಪ್ಪಿಕೊಂಡು ಅದರ ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದು, ಮನಸ್ಸಿನ ಮೇಲೆ ನಿಯಂತ್ರಣವನ್ನು ಸಾಧಿಸುವುದು, ಸತ್ಯ ಧರ್ಮಗಳ ಮಾರ್ಗದಲ್ಲಿ ನಡೆಯುವುದು ಇವೆಲ್ಲವೂ ಅವರಿಗೆ ಸಾಧ್ಯವಾದುದು ತಾಯಿಯ ಮಾರ್ಗದರ್ಶನದಿಂದ ಹಾಗೂ ರಾಮನಾಮ ಸ್ಮರಣೆಯಿಂದ ಎನ್ನಬಹುದು. ಹರಿಶ್ಚಂದ್ರನ ಸತ್ಯದ ನಿಷ್ಠೆ ಮತ್ತು ರಾಮನ ವ್ಯಕ್ತಿತ್ವದಿಂದ ಬಹುವಾಗಿ ಪ್ರಭಾವಿತರಾದ ಅವರು ತಮ್ಮ ಜೀವನದಲ್ಲೂ ನೈತಿಕಮೌಲ್ಯಗಳನ್ನು ಅಳವಡಿಸಿಕೊಂಡು ಸತ್ಯ ಧರ್ಮಗಳನ್ನು ವ್ರತದಂತೆ ಪಾಲಿಸುತ್ತ ಬಂದರು. ಅಹಿಂಸೆಯನ್ನು ಅಸ್ತ್ರದಂತೆ ಉಪಯೋಗಿಸಿದವರು ಮತ್ತು ರಾಷ್ಟ್ರವನ್ನು ರಾಮರಾಜ್ಯವನ್ನಾಗಿ ಮಾಡಬೇಕೆಂಬ ಕನಸನ್ನು ಕಂಡವರು ಇಡೀ ಜಗತ್ತಿನಲ್ಲಿ ಬಹುಶಃ ಗಾಂಧೀಜಿಯವರೊಬ್ಬರೇ ಎನ್ನಿಸುತ್ತದೆ. ಅವರು ಜನಿಸಿದ್ದು ನಮ್ಮ ಭಾರತದ ನೆಲದಲ್ಲಿ ಎನ್ನುವ ಹೆಮ್ಮೆ ನಮಗಿದೆ. ಅಂತಹ ಅಪರೂಪದ ವ್ಯಕ್ತಿತ್ವವನ್ನು ಅವರಲ್ಲಿ ತುಂಬಿದ ಅವರನ್ನು ಹೆತ್ತ ಆ ಮಹಾಮಾತೆಗೊಂದು ನಮನ. ದೇಶಭಕ್ತಿ ಮಾಯವಾಗಿ ಸ್ವಹಿತಾಸಕ್ತಿಗಳೇ ವಿಜೃಂಭಿಸುವ ,ವಂಚನೆ, ಭ್ರಷ್ಟಾಚಾರ, ಭಯೋತ್ಪಾದನೆ, ಅತ್ಯಾಚಾರ, ಕೊಲೆ ಮುಂತಾದ ಬೇಡವಾದ ವಿಷಯಗಳೇ ಮನಸ್ಸುಗಳನ್ನು ಆಳುತ್ತಿರುವ ಈ ಕಾಲಘಟ್ಟದಲ್ಲಿ ಮಾನವೀಯ ಮೌಲ್ಯಗಳನ್ನು ಮತ್ತೊಮ್ಮೆ ಎಲ್ಲರ ಮನಸ್ಸುಗಳಲ್ಲಿ ಸ್ಥಾಪಿಸಲು ಅನೇಕ ಗಾಂಧಿಗಳು ಹುಟ್ಟಿಬರಬೇಕು. ಅದಕ್ಕಾಗಿ ಮಾತೆಯರು ತಮ್ಮ ಮಕ್ಕಳಲ್ಲಿ ಜಗತ್ತಿನ ಎಲ್ಲ ಧಾರ್ಮಿಕಗ್ರಂಥಗಳನ್ನು ಓದುವ ಹವ್ಯಾಸವನ್ನು ಮೂಡಿಸಿ ಆದರ್ಶವೆನಿಸುವಂತಹ ಉತ್ತಮ ಗುಣಗಳನ್ನು ಮಕ್ಕಳ ಮನದಲ್ಲಿ ಬಿತ್ತಬೇಕು. ಸದ್ಯಕ್ಕೆ ನಮಗಿರುವ ಮಾರ್ಗವೆಂದರೆ, ಗಾಂಧಿಯವರಂತೆ– ಸಬ್ ಕೊ ಸನ್ಮತಿ ದೇ ಭಗವಾನ್– ಎಂದು ಆ ದೇವರಲ್ಲಿ ಬೇಡಿಕೊಳ್ಳುವುದು ಮಾತ್ರ, ಇದು ಎಲ್ಲ ಕಾಲದಲ್ಲೂ ನಿರಂತರವಾಗಿ ಎಲ್ಲರೂ ಮಾಡಬೇಕಾದ ಪ್ರಾರ್ಥನೆ ಎನ್ನುವುದೇ ಇದರ ವಿಶೇಷ.

●

ಖಾದಿ ವಿಚಾರ

ಖಾದಿಯ ಶಕ್ತಿ; ಒಂದು ಚಿಂತನೆ

ಬಾಂಬ್‌ನಲ್ಲಿ ಇರುವ ಶಕ್ತಿಗಿಂತಲೂ ಎರಡರಷ್ಟು ಹೆಚ್ಚಿನ ಶಕ್ತಿ ಖಾದಿಯಲ್ಲಿದೆ. ವ್ಯತ್ಯಾಸವಿಷ್ಟೆ: ಬಾಂಬ್ ಶಕ್ತಿ ವಿಧ್ವಂಸಕ, ಖಾದಿಯ ಶಕ್ತಿ ವಿಧಾಯಕ. ಖಾದಿಯಲ್ಲಿಯ ಈ ಶಕ್ತಿಯನ್ನು ಮಹಾತ್ಮಗಾಂಧಿ ನೋಡಿದ್ದರು ಆದ್ದರಿಂದ ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಪದವಿಯನ್ನು ಪಡೆದಾದ ನಂತರ ಭಾರತಕ್ಕೆ ಬಂದ ಮೇಲೆ ಚರಖದ ಶೋಧನೆ ಮಾಡಿದರು ಮತ್ತು ಅದರ ಮೇಲೆ ಅನೇಕ ಪ್ರಯೋಗ ಮಾಡಿದರು. ಚರಖ ಅಥವಾ ವಸ್ತ್ರಕಲೆ ಆದಿಕಾಲದಿಂದ ಭಾರತೀಯರಿಗೆ ಗೊತ್ತಿದೆ. ಆದರೆ ಇಡೀ ರಾಷ್ಟ್ರದ ಉನ್ನತಿ ಆಗುವಂಥ ಒಂದು ಅರ್ಥಶಾಸ್ತ್ರವನ್ನು ನಿರ್ಮಿಸಿದುದು ಮಹಾತ್ಮಗಾಂಧೀಯವರ ವಿಶೇಷತೆ ಆಗಿದೆ. ಆದ್ದರಿಂದ ಅವರು "ಖಾದಿ ಕೇವಲ ವಸ್ತ್ರವಲ್ಲ, ವಿಚಾರ" ಎಂದು ಹೇಳಿದರು. ಅವರ ಅಗಲುವಿಕೆಯ ನಂತರ ನಾವೆಲ್ಲರೂ ಈ ಎಲ್ಲವನ್ನು ಮರೆತು ಬಿಟ್ಟೆವು ಮತ್ತು ಖಾದಿ ಎಂದರೆ ಬಟ್ಟೆಯೆಂದೂ ಅದರ ತಯಾರಿಗಾಗಿ 'ಖಾದಿ ಕಮಿಷನ್' ಬೇಕು ಎಂಬೆಲ್ಲಾ ಮಾತುಗಳು ಬಂದವು. ಏನಾಗಬೇಕಿತ್ತೋ ಅದು ಆಗಿ ಹೋಯಿತು. ಈಗ ಮುಂದೇನು ಮಾಡಬೇಕಿದೆ ಎಂಬುದನ್ನು ನಾವು ಯೋಚಿಸಬೇಕಿದೆ.

ನಾನು ಕೆಲವು ಪ್ರಯೋಗ ಮಾಡಿದ್ದೇನೆ. ನನ್ನ ಅನುಭವ ಎಲ್ಲರ ಮುಂದೆ ಇಡಬಯಸುತ್ತೇನೆ. ನಾನು ಹುಟ್ಟಿದಾಗಿನಿಂದ ಖಾದಿ ಧರಿಸುತ್ತಿದ್ದೇನೆ. ನನ್ನ ತಂದೆ ೧೯೪೨ ರಲ್ಲಿ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗಿಯಾಗಿದ್ದರು. ಮನೆಯಲ್ಲಿ ಚರಖ ಇತ್ತು. ತಾಯಿ ಕೂಡ ನೂಲು ತೆಗೆಯುತ್ತಿದ್ದರು ಹಾಗು ಖಾದಿ ಧರಿಸುತ್ತಿದ್ದಳು. ನನ್ನ ಶಿಕ್ಷಣ ತಿಲಕ್ ರಾಷ್ಟ್ರೀಯ ವಿದ್ಯಾಲಯ ಖಾಮ್‌ಗಾವ್‌ನಲ್ಲಿ ೧೯೫೨ ರಿಂದ ೧೯೫೮ ರವರೆಗೆ ಆಯಿತು. ಶಿಕ್ಷಕರು ಕೂಡ ಸ್ವಾತಂತ್ರ್ಯ ಸೇನಾನಿಯಾಗಿದ್ದರು. ಖಾದಿಯ ಮೂಲಕ ಹಳ್ಳಿಗಳ ಉದ್ಧಾರವಾಗುವುದೆಂದು ನಮಗೆ ಪಾಠ ಮಾಡಲಾಗಿತ್ತು. ಆಗ ನಾನು ನನ್ನ ಕೊನೆಯ ಉಸಿರಿನವರೆಗೆ ನಿರ್ವ್ಯಸನಿಯಾಗಿಯೇ ಇರುವೆ ಮತ್ತು ಖಾದಿ ಧರಿಸುವೆ ಎಂದು ಸಂಕಲ್ಪ ಮಾಡಿದೆ. ಆದರೆ ವಯಸ್ಸು ಹೆಚ್ಚಾಗುತ್ತಿದೆ. ನನ್ನ ಸುತ್ತಲು ಒಂದು ಹಳ್ಳಿ ಕೂಡ ಖಾದಿ ಮೂಲಕ ಉದ್ಧಾರವಾಗಿರುವುದು ಕಂಡು ಬರಲಿಲ್ಲ. ಅದಕ್ಕಾಗಿ ನನಗೆ ಬಹಳ ದುಃಖವಾಯಿತು. ಗ್ರಾಮೋದ್ಧಾರಕ್ಕಾಗಿ ದೊಡ್ಡ-ದೊಡ್ಡ ಕಾರ್ಖಾನೆಗಳು ಉಪಯುಕ್ತವಾಗಿಲ್ಲ. ಚಿಕ್ಕ-ಚಿಕ್ಕ ಘಟಕಗಳನ್ನು ಹಳ್ಳಿ ಹಳ್ಳಿಗಳಲ್ಲಿ ಸ್ಥಾಪಿಸಬೇಕು. ಅದರಿಂದಾಗಿ ನಿರುದ್ಯೋಗಿಗಳಿಗೆ ಕೂಡ ಕೆಲಸ ಸಿಗುವುದು.

– ಪ್ರ.ನ. ನೆಮಾಡೆ

ನಾಲ್ಕು ನಿಟ್ಟಿನಿಂದ

ಅರಣ್ಯವನ್ನು ಸಂರಕ್ಷಿಸಬೇಕಾದ ನಮ್ಮ ಸರ್ಕಾರಗಳೇ ಅರಣ್ಯಕ್ಕೆ ಅತಿ ದೊಡ್ಡ ಕಂಟಕವಾಗಿವೆ. ಅಭಿವೃದ್ಧಿ ಹೆಸರಿನಲ್ಲಿ, ಅರಣ್ಯವಾಸಿಗಳ, ಬದುಕಿನ ಹೆಸರಿನಲ್ಲಿ ಅರಣ್ಯ ನಾಶ ಎಗ್ಗಿಲ್ಲದೆ ನಡೆಯುತ್ತಿರುವುದು ಸರ್ಕಾರಗಳ ಅರಣ್ಯ ವಿರೋಧಿ ನೀತಿಗಳಿಂದಾಗಿ.

* ಮಹಾಲೇಖಪಾಲ

ನಾವು ಹೆಚ್ಚು ಹೆಚ್ಚು ಜನರನ್ನು ಕೃತಜ್ಞತೆಯಿಂದ ಕಾಣುವಂತಾದಾಗ ಜಗತ್ತು ಹೆಚ್ಚು ಹೆಚ್ಚು ಸುಂದರವಾಗಿಯೂ ಕಾಣಲಾರಂಭಿಸುತ್ತದೆ.

* ರಘು

ಸರ್ಕಾರದ ಒಡಕಲು ಧ್ವನಿ ರಾಷ್ಟ್ರಪತಿ ಸ್ಥಾನಕ್ಕೆ ರಾಮನಾಥ ಕೋವಿಂದರವರನ್ನು ಸೂಚಿಸುವ ಸಮಯದಲ್ಲಿ ಕೋವಿಂದರವರು ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ನುರಿತರಾಗಿದ್ದಾರೆಂದು ಒಡೆತನದಿಂದ ಬಂದವರಾಗಿದ್ದಾರೆಂದು ಪ್ರಧಾನ ಮಂತ್ರಿ ಮೋದಿಯವರು ಹೇಳಿದ್ದಾರೆ. ಎನ್.ಡಿ.ಎ ಸರ್ಕಾರ್ಥ ತೆರೆಯ ಮರೆಯಲ್ಲಿ ಹಿಂದಿಯನ್ನು ಇಂಗ್ಲೀಷಿನ ಬದಲಾಗಿ ಎತ್ತಿ ಇಡಿಯಲು ಪ್ರಯತ್ನಿಸುತ್ತಿದೆ. ಈ ವಿಷಯದಲ್ಲಿ ಹಿಂದಿಯೇತರ ಭಾಷಿಕರ ಹಿತದ ಬಗ್ಗೆ ಗಮನ ಕೊಡುತ್ತಿಲ್ಲ, ಏಕೆ

* ವಿ. ಪದ್ಮನಾಭನ್

೨೦೦೧ ರಿಂದ ೨೦೧೫ರ ಅವಧಿಯಲ್ಲಿ ದಟ್ಟ ಅರಣ್ಯ ಪ್ರದೇಶ ಗಣನೀಯ ಪ್ರಮಾಣದಲ್ಲಿ ಕರಗಿದೆ. ಅರಣ್ಯದ ಶೋಷಣೆ ದಿನೇ ದಿನೇ ಹೆಚ್ಚುತ್ತಲೇ ಇದೆ.

ಕರ್ನಾಟಕ ಆರ್ಥಿಕ ಸಮಿಕ್ಷೆ
೨೦೧೬-೨೦೧೭

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ ದತ್ತು ಕೇಂದ್ರಕ್ಕೆ ವಿವಿಧ ಸಾಮಾಜಿಕ ಸಮಸ್ಯೆಗಳಿಂದಾಗಿ ಹೆತ್ತವರಿಂದ ಪರಿತ್ಯಜಿಸಲ್ಪಟ್ಟ ಅನೇಕ ಮಕ್ಕಳು ಬಂದರು. ಕೆಲವು ಮಕ್ಕಳು ತಾತ್ಕಾಲಿಕ ಪೋಷಣೆಗಾಗಿ ಬಂದಿವೆ. ತಿಂಗಳ ಕೊನೆಯಲ್ಲಿ ದತ್ತು ಕೇಂದ್ರದಲ್ಲಿ ಆಶ್ರಯ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಹದಿಮೂರು ಇದೆ.

***

ಮೈಸೂರು ನಗರದಲ್ಲಿರುವ ಕಾಮಾಕ್ಷಿ ಆಸ್ಪತ್ರೆ ತನ್ನ ಸ್ಥಾಪನ ದಿನವನ್ನು ಆಚರಿಸಿತು. ಆಚರಣೆಯ ಸಂತೋಷದ ಸಂದರ್ಭದ ನೆನಪಿನಲ್ಲಿ ಜನಪದ ಸೇವಾ ಟ್ರಸ್ಟಿಗೆ ಐವತ್ತು ಸಾವಿರ ರೂಗಳನ್ನು ದಾನವಾಗಿ ಕೊಟ್ಟಿತು. ಆಸ್ಪತ್ರೆಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಜನಾರ್ಧನ್ ಮತ್ತು ಕಾರ್ಯದರ್ಶಿ ಸಂತೋಷ್ ಕೌಲಗಿಯವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಆ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ತಜ್ಞರಾದ ಡಾ॥ಶಣ್ಮೈರವರು ಅವರನ್ನು ನೆನೆಯಬೇಕು. ಅವರು ಟ್ರಸ್ಟಿನ ದತ್ತು ಕೇಂದ್ರದ ಮಕ್ಕಳ ಆರೋಗ್ಯವನ್ನು ಬಹು ಪ್ರೀತಿಯಿಂದ ಪರೀಕ್ಷೆ ಮಾಡುತ್ತಾರೆ ಮತ್ತು ರಕ್ಷಿಸುತ್ತಾರೆ.

***

ಬೆಂಗಳೂರಿನ ಸರ್ಕಾರಿ ಹೋಮಿಯೋಪತಿ ಕಾಲೇಜಿನ ಅಧ್ಯಾಪಕರಾದ ಡಾ॥ವಿಜಯ್‌ಶಂಕರ್ ಮತ್ತು ಅವರ ಪತ್ನಿ ಭೇಟಿ ಕೊಟ್ಟರು.

***

ಜೂನ್ ಮಾಹೆಯಲ್ಲಿ ೩೯,೮೯೫ ಮೌಲ್ಯದ ಖಾದಿ ಬಟ್ಟೆ ವ್ಯಾಪಾರವಾಯಿತು.

***

ಅನಂತಪುರ ಜಿಲ್ಲೆಯ ಹಿಂದೂಪೂರ್‌ನಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಕೆಲಸ ಮಾಡುತ್ತಿರುವ ಸೇವಾ ಮಂದಿರ ಎಂಬ ಸೇವಾ ಸಂಸ್ಥೆಯ ನಿರ್ದೇಶಕರಾಗಿರುವ ಶ್ರೀಮತಿ ಕೆ. ಸರಿತಾ ಟ್ರಸ್ಟಿಗೆ ಭೇಟಿ ಕೊಟ್ಟು ಕಾರ್ಯಚಟುವಟಿಕೆಯನ್ನು ಪರಿಚಯಿಸಿಕೊಂಡರು. ತಮ್ಮ ಉದ್ದೇಶಿತ ಖಾದಿ ಭಂಡಾರಕ್ಕಾಗಿ ಟ್ರಸ್ಟಿನಲ್ಲಿ ಉತ್ಪಾದನೆಯಾಗಿರುವ ಖಾದಿಯನ್ನು ಖರೀದಿಸಿದರು. ಸೇವಾಮಂದಿರ ಅನೇಕ ಶಿಕ್ಷಣ ಸಂಸ್ಥೆಗಳನ್ನು ಕೂಡ ನಡೆಸುತ್ತಿದೆ.

ಮುಸ್ಸಂಜೆಯು ಬೆಳಕಿನಲ್ಲಿ.....!

– ಸುರೇಂದ್ರ ಕೌಲಗಿ

ದಿನಾಲು ಸಾಯಂಕಾಲ ಪೂರ್ಣಾಂಧ ನಾರಾಯಣ ಶೆಟ್ಟಿ ಮತ್ತು ಅವರ ಪತ್ನಿ ಶಾರದಾ ವಾಯುವಿಹಾರಕ್ಕೆ ಹೋಗುತ್ತಾರೆ. ನಾರಾಯಣ ಶೆಟ್ಟರನ್ನು ಬಹಳ ಕಾಲದಿಂದ ಬಲ್ಲೆ. ಅಷ್ಟೇ ಏಕೆ, ಅವರ ತಂದೆ ಸಂಜೀವಶೆಟ್ಟಿಯವರನ್ನು ಕೂಡ ಬಲ್ಲೆ. ಅವರು ಖಾದಿ ಬಟ್ಟೆ ನೇಯಲು ಮುಂದೆಬಂದವರಲ್ಲಿ ಒಬ್ಬರು. ಸಾಮಾನ್ಯವಾಗಿ ಖಾದಿ ನೇಯಲು ಮುಂದೆ ಬರುವಂಥ ನೇಕಾರರು ಕಡಿಮೆ. ಏಕೆಂದರೆ ಅವರಿಗೆ ರೇಷ್ಮೆದಾರದಲ್ಲಿ ಅಥವಾ ಮಿಲ್‌ದಾರದಲ್ಲಿ ನೇಯುವ ಅಭ್ಯಾಸ ಇರುತ್ತದೆ. ಆ ದಾರದಲ್ಲಿ ನೇಯ್ಗೆ ಹೆಚ್ಚು ಸಾರಾಗ ಮತ್ತು ಉತ್ಪಾದನೆ ಕೂಡ ಹೆಚ್ಚು. ಖಾದಿ ನೇಯ್ಗೆಯಲ್ಲಾದರೆ ಕೈಯಿಂದ ತೆಗೆದ ಹತ್ತಿಯ ದಾರ. ಆ ದಾರಕ್ಕೆ ಲಾಳಿಯ ಒಡೆತವನ್ನು ತಡೆಯುವ ಹಾಗೂ ಹಸು ಸಿದ್ಧಮಾಡುವಾಗ ಆ ದಾರ ಒಳಗಾಗುವ ಒಡೆತಗಳನ್ನು ತಡೆಯುವ ಆ ಶಕ್ತಿ ದಾರಕ್ಕೆ ಇಲ್ಲ. ದುರ್ಬಲವಾದ ಕೈ ದಾರದಲ್ಲಿ ತಯಾರಾಗುವ ಖಾದಿ ನೇಯ್ಗೆ ಮಾಡಲು ಮುಂದೆ ಬಂದ ಸಂಜೀವ ಶೆಟ್ಟರಲ್ಲಿ ಖಾದಿ ನೇಕಾರರಿಗೆ ಬೇಕಾಗಿದ್ದ ಗುಣ ಇತ್ತು. ಆ ಗುಣ ತಾಳ್ಮೆಗೆ ಸಂಬಂಧಿಸಿದ್ದು ಮತ್ತು ನಯವಿನಯಗೆ ಸಂಬಂಧಿಸಿದ್ದು. ಈ ಗುಣದ ಕಾರಣದಿಂದಾಗಿ ಅವರು ಖಾದಿ ನೇಯ್ಗೆ ಮಾಡಿದರು. ನೇಯ್ಗೆಗಾಗಿ ಬೇಕಾಗುತ್ತಿದ್ದ ಖಾದಿ ದಾರವನ್ನು ಮೇಲುಕೋಟೆಯಿಂದ ಐದು ಕಿ.ಮೀ ದೂರದಲ್ಲಿದ್ದ ಹೊಣಕೆರೆ ಗ್ರಾಮದ ಲೋಕಪಾವನಿ ಖಾದಿ ಕೇಂದ್ರಕ್ಕೆ ನಡೆದುಕೊಂಡು ಹೋಗಿ ತರುತ್ತಿದ್ದರು. ಆಗಾಗ್ಗೆ ನಾನು ಸಂಜೀವ ಶೆಟ್ಟರ ಮನೆಗೆ ಹೋಗುತ್ತಿದ್ದೆ. ಇಂಥ ಒಳ್ಳೆಯ ನೇಕಾರನ ಮಗನಾದ ನಾರಾಯಣ ಶೆಟ್ಟಿ ಈಗ ಪೂರ್ಣ ಅಂಧ. ಅವರಿಗೆ ಈ ಅಂಧತ್ವ ಬಂದದ್ದು ಸಹಜವಾಗಿ ಅಲ್ಲ. ಕಣ್ಣಿನ ತೊಂದರೆಗಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಬೆಂಗಳೂರಿನ ಸರ್ಕಾರಿ ಮಿಂಟೋ ಆಸ್ಪತ್ರೆಗೆ ಸೇರಿಕೊಂಡಿದ್ದರು. ಆಗ ಅಲ್ಲಿ ಆದ ಶಸ್ತ್ರಕ್ರಿಯೆ ಸಫಲವಾಗಲಿಲ್ಲ. ಬದಲಿಗೆ ಕಣ್ಣನ್ನು ಕಳೆದುಕೊಳ್ಳಬೇಕಾದಂಥ ಪರಿಸ್ಥಿತಿ ಉಂಟಾಯಿತು. ಕಣ್ಣಿನ ಶಸ್ತ್ರಕ್ರಿಯೆ ಮಾಡಿಸಿಕೊಂಡಾಗ ನಾರಾಯಣ ಶೆಟ್ಟಿಯವರ ವಯಸ್ಸು ಐವತ್ತು ಇದ್ದಿರಬಹುದು. ಈಗ ಅವರ ವಯಸ್ಸು ಅರವತ್ತನ್ನು ದಾಟುತ್ತಿದೆ. ಅವರು ಕಳೆದ ಹದಿನಾರು ವರ್ಷಗಳಿಂದ ಅಂಧರಾಗಿಯೇ ಜೀವನ ನಡೆಸುತ್ತಿದ್ದಾರೆ. ಅವರಿಗೆ ಸಹಾಯಕರಾಗಿ ಅವರ ಪತ್ನಿ ಶಾರದಮ್ಮ ಇದ್ದಾರೆ.

ಅವರ ಸೇವೆಯ ಬಲದಿಂದಲೆ ನಾರಾಯಣ ಶೆಟ್ಟಿ ಆರೋಗ್ಯದಿಂದಿರಲು ಮತ್ತು ಲವಲವಿಕೆಯಿಂದಿರಲು ಸಾಧ್ಯವಾಗಿದೆ. ರಾಜ್ಯ ಸರ್ಕಾರದಿಂದ ನಾರಾಯಣ ಶೆಟ್ಟಿಯವರಿಗೆ ಪ್ರತಿ ತಿಂಗಳು ೧೨೦೦ ಮಶಾಸನ ಸಿಗುತ್ತದೆ. ಸ್ವಂತ ಮನೆಯಿದೆ, ಬಿ.ಪಿ.ಎಲ್ ಕಾರ್ಡಿನ ಮೂಲಕ ಕೆಲವು ಆಹಾರ ಧಾನ್ಯ ಪದಾರ್ಥಗಳು ದೊರೆಯುತ್ತವೆ. ಸಂಬಂಧಿಗಳು ಇದ್ದರೂ ಅವರೆಲ್ಲ ದೂರದಲ್ಲಿದ್ದಾರೆ. ಈ ಇಬ್ಬರೆ ದಂಪತಿಗಳು ಜೀವನ ಸಾಗಿಸುತ್ತಿದ್ದಾರೆ. ಸೌದೆಒಲೆಯ ಮೇಲೆ ಅಡುಗೆ ಮಾಡುವ ಶಾರದಮ್ಮ ಆಗಾಗ್ಗೆ ಊರ ಹತ್ತಿರದ ಕುರಚಲು ಕಾಡಿಗೆ ಹೋಗುತ್ತಾರೆ. ಅಲ್ಲಲ್ಲಿ ಬೆಳೆದಿರುವ ಮೆಳೆಯನ್ನು ಕತ್ತರಿಸಿ ತಂದು ಅಡುಗೆ ಮಾಡುತ್ತಾರೆ ಮತ್ತು ನೀರು ಕಾಯಿಸುತ್ತಾರೆ. ನಾರಾಯಣಶೆಟ್ಟಿಯವರನ್ನು ನೋಡಿದಾಗ ಅವರಲ್ಲಿರುವ ಆತ್ಮಸ್ಥೈರ್ಯ ನನಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಮನುಷ್ಯನಾಗಿ ಹುಟ್ಟಿದವನು ಕರ್ಮಮಾಡುತ್ತಲೇ ನೂರು ವರ್ಷ ಬಾಳಬೇಕೆಂದು ಸನಾತನ ಸಾಹಿತ್ಯ ಹೇಳುತ್ತದೆ. ಆದರೆ ನಾರಾಯಣ ಶೆಟ್ಟಿಯವರಿಗೆ ಅಂಧತ್ವದ ಕಾರಣದಿಂದ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ಆದರೂ ಅವರು ಯಾವುದೇ ರೀತಿ ಬೇಸರಪಟ್ಟುಕೊಳ್ಳದೆ ಊರುಗೋಲು ಹಿಡಿದುಕೊಂಡು ಶಾರದಮ್ಮನ ಜೊತೆ ಎದೆ ಉಬ್ಬಿಸಿಕೊಂಡು ಧೃಢವಾದ ಹೆಜ್ಜೆಯಿಂದ ವಾಯುವಿಹಾರಕ್ಕೆ ಹೋಗುವುದನ್ನು ನೋಡಿದಾಗ ಯಾವುದೇ ದುಃಖದ ಭಾಷೆಯಿಲ್ಲದೆ ಗಟ್ಟಿ ಧ್ವನಿಯ ಮಾತುಗಳನ್ನು ಕೇಳಿದಾಗ ಕಣ್ಣಿದ್ದೂ ನಿರುತ್ಸಾಹದ ಜೀವನ ಕಳೆಯುವಂಥವರು ನಾರಾಯಣಶೆಟ್ಟಿಯವರಿಂದ ಪ್ರೇರಣೆ ಪಡೆಯಬಹುದಲ್ಲವೆ

●

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ಹರಿಕೃಷ್ಣ ಪುನರೂರು, ಶ್ರೀ ರಮಾನಾಥ ಕೋಟೆಕರ್
ಶ್ರೀ ನಾಗರಾಜು ಎಂ, ಶ್ರೀ ಜಗದೀಶ್ ಶೆಟ್ಟಿ – ಮಂಗಳೂರು
ಶ್ರೀ ಆತ್ಮಾನಂದ – ಮಂಡ್ಯ
ಶ್ರೀ ಚಂದ್ರಶೇಖರ್ ಎಂ – ಶಿವಮೊಗ್ಗ

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ಮಿನಿನ ವಿಲ್ಲಿ ಗುಡಿನ್ನೋ – ಕಾರವಾರ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ. ಪತ್ರಿಕೆಯಲ್ಲಿಯ ಲೇಖನಗಳ ಬಗ್ಗೆ ಅಭಿಪ್ರಾಯ ಮತ್ತು ಟೀಕೆ-ಟಿಪ್ಪಣಿಗಳನ್ನು ತಿಳಿಸಬೇಕಾಗಿ ವಿನಂತಿ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ಚಂದಾದಾರರಲ್ಲಿ ವಿನಂತಿ:–

"ಜನಪದ ವಿಚಾರ" ಪ್ರತಿ ತಿಂಗಳು ೩೦ನೇ ತಾರೀಖು ಅಂಚೆಗೆ ಹೋಗುತ್ತದೆ. ತಿಂಗಳ ಒಂದು ವಾರದಲ್ಲಿ ಪತ್ರಿಕೆ ತಲುಪದಿದ್ದರೆ ಕೂಡಲೆ ತಿಳಿಸಿ –೯೧೪೧೭೦೦೮೧೨

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237